www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 3 ಮಾರ್ಚ್ 2013
Volume : IX Issue : III March 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಕಾಪಾಡಿಕೊಳ್ಳು – ವಯಸ್ಕರ ಸ್ವರ
3. ವಿಶೇಷ ಸೂಚನೆಗಳು
4. ಆರೋಗ್ಯ ಸ್ವರ
5. ಪ್ರಶ್ನೋತ್ತರಗಳ ಸ್ವರ
6. ಅನಾಥರ ಸ್ವರ
7 ಸ್ಥಳೀಯ ಮತ್ತು ವಿದೇಶ ಸುದ್ಧಿ
8. ಪ್ರಾರ್ಥನಾ ಸ್ವರ
9. ತಿಳುವಳಿಕೆಯ ಸ್ವರ
10. ಯೋನನು
11 ಆಪ್ತ ಸಲಹೆ
12. ಮಹಿಳೆಯರ ಸ್ವರ
13. ಮಕ್ಕಳ ಸ್ವರ
14. ಡಿಜಿಎಮ್ ಬೇತೇಲ್ ಅಂಕಣ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ವಂದನೆಗಳು.

ಎಜ್ರನ ಕುರಿತು ನಾವು ಕಲಿಯುವುದಾದರೆ ಎಜ್ರ. 7:6–11 ರಲ್ಲಿ ಆತನು ಒಬ್ಬ ಸತ್ಯವೇದ ಪಂಡಿತನಾಗಿದ್ದನು ಎಂದು ತಿಳಿದುಕೊಳ್ಳಬಹುದು. ಆತನು ಸತ್ಯವೇದವನ್ನು ಅಭ್ಯಾಸ ಮಾಡುವಂತಹ 2 ಉದ್ದೇಶಗಳು ಇದ್ದವು.

ತಾನು ದೇವರ ವಾಕ್ಯ ಅನುಸರಿಸಲು, 2) ಮತ್ತೊಬ್ಬರಿಗೆ ಕಲಿಸಲು. ಪ್ರಿಯ ಸಹೋದರ, ಸಹೋದರಿಯರೇ ಇಂದು ನಾವು ದೇವರ ವಾಕ್ಯವನ್ನು ಅಭ್ಯಾಸಿಸುವ ಉದ್ದೇಶವು ಏನಾಗಿದೆ? ನಮ್ಮನ್ನೇ ಪ್ರಶ್ನೆ ಮಾಡಬೇಕಾಗಿದೆ. ಸುಮ್ಮನೇ ಓದಬೇಕು ಅಂಥ ಓದುವುದಲ್ಲ. ಒಂದು ಉದ್ದೇಶ ಇಟ್ಟು ನಾವು ಓದಬೇಕು. ದೇವರ ವಾಕ್ಯ ತಿಳಿಯದ, ಸತ್ಯದೇವರನ್ನು ಅರಿಯದ ಎಷ್ಟೋ ಜನರನ್ನು ನಾವು ಈ ಲೋಕದಲ್ಲಿ ಕಾಣಬಹುದು. ಅವರಿಗೆಲ್ಲಾ ದೇವರ ವಾಕ್ಯ ತಿಳಿಸಲು, ಸತ್ಯದೇವರನ್ನು ತಿಳಿಸಲು, ರಕ್ಷಣೆಗೆ ನಡೆಸಲು ನಾವೆಲ್ಲರೂ ಜವಾಬ್ದಾರರಾಗಿದ್ದೇವೆ ಎಂದು ಮರೆಯಬಾರದು. **"ಕ್ರಿಸ್ತನ ವಾಕ್ಯವು ನಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ. ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ"** (ಕೊಲೊ. 3:16–17). ಸಹೋದರ, ಸಹೋದರಿಯೇ ನಮ್ಮ ಕರ್ತವ್ಯವನ್ನು ಮರೆಯದೇ ಮಾಡೋಣ ಕ್ರಿಸ್ತನ ಮೆಚ್ಚಿಗೆಗೆ ಪಾತ್ರರಾಗೋಣ. **"ಆಗ ಯೇಸು ಹತ್ತರಕ್ಕೆ ಬಂದು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು"** (ಮತ್ತಾ. 28:18–20). ಆಮೆನ್ ಹಲ್ಲೆಲೂಯ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಭೂಮಿಯ ಕೆಳಗಿನ ಭಾಗಕ್ಕೆ ಹಿಬ್ರಿಯ ಮೂಲ ಭಾಷೆಯಲ್ಲಿ ಶಿಯೋಲ್ ಎಂದು ಹೇಳುತ್ತಾರೆ, ಪರದೈಸು ಎಂಬ ಪದ ಸತ್ಯವೇದದಲ್ಲಿ ಮೂರು ಕಡೆ ಬರೆಯಲ್ಪಟ್ಟಿವೆ. ಎ) ಲೂಕ. 23:43 ಬಿ) 2 ಕೊರಿ. 12:2–6 ಸಿ)ಪ್ರಕ. 2:3 ಸ್ಥಳ ಹಾಗೂ ವೈಕುಂಟ ಎಂಬಿತ್ಯಾದಿ.

1) **ಮೊದಲ ಪರದೈಸು :–** ದೇವರು ವಾಸಮಾಡುವ ಸ್ಥಳ ಪರಲೋಕದ ಚೆಯೋನ್ ಪ್ರಕ. 4:1–11ರಲ್ಲಿ ನಿರಂತರವೂ ಆರಾಧನೆ ನಡೆಯುತ್ತಿರುತ್ತದೆ. ಪರಲೋಕವು 3ನೇ ಆಕಾಶದ ಮೇಲೆ ಇದೆ ಎಂದು ತಿಳಿದುಕೊಳ್ಳಬಹುದು. 3ನೇ ಆಕಾಶದ ಮೇಲೆ ಉತ್ತರದಿಕ್ಕಿನ ಸುರಗಣ ಪರ್ವತದಲ್ಲಿ ದೇವರು ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆಂದು ದೇವರ ವಾಕ್ಯದ ಮೂಲಕ ತಿಳಿದುಕೊಳ್ಳಬಹುದು. ಯೆಶಾ. 14:13–14 ಈ ಸ್ಥಳವನ್ನು ಉನ್ನತ ಮೇಘಮಂಡಲವೆಂಬುದಾಗಿ ಸಹ ಕರೆಯುತ್ತಾರೆ (ಯೆಶಾ. 14:13).

2) **ಲೂಸಿಫರನ ಪರದೈಸು :–** ಇದು ಸುಂದರವಾದ ಸ್ಥಳವಾಗಿತ್ತು. ಆಂಗ್ಲದಲ್ಲಿ ಲೂಸಿಫರ್ ಎಂಬ ಪದಕ್ಕೆ ಕನ್ನಡದಲ್ಲಿ ಉದಯನಕ್ಷತ್ರ ಎಂದು ಅರ್ಥ. ಸೈತಾನ ಅಂದರೆ ಕೆಡುಕನು.

1. **ಈ ಪರದೈಸಿನ ವಿಶೇಷತೆ :**
   1) ಇದು ದೇವರ ಉದ್ಯಾನವನವೆಂಬ ಏದೆನ್ ಎಂದು ಕರೆಯಲ್ಪಡುತ್ತಿತ್ತು (ಯೆಹೆ. 28:13).
   2. ರತ್ನಗಳ ಗೂಡುಗಳು, ಮನೆಗಳು ಸುವರ್ಣರಚಿತವಾಗಿದ್ದವು (ಯೆಹೆ. 28:13).
   3. ದೇವರ ಪರಿಶುದ್ಧ ಪರ್ವತವಾಗಿತ್ತು (ಯೆಹೆ. 28:14).
   4. ಕೆಂಡದ ಮಳೆಯ ವಿಹಾರ ಇತ್ತು (ಯೆಹೆ. 28:14).

2) **ಆಗಿನ ಲೂಸಿಫರನ ವಿಶೇಷತೆ :–**
   1) ಸರ್ವ ಸುಲಕ್ಷಣಶಿರೋಮಣಿ
   2) ಪೂರ್ಣ ಜ್ಞಾನಿ (ಯೆಹೆ. 28:12).
   3) ಪರಿಪೂರ್ಣ ಸುಂದರ (ಯೆಹೆ. 28:12)
   4) ದೇವರ ಉದ್ಯಾನ ವನವಾದ ಏದೆನಿನಲ್ಲಿ ವಾಸ (ಯೆಹೆ. 28:13).
   5) ಮಾಣಿಕ್ಯ, ಪುಷ್ಪರಾಗ, ಪಚ್ಚೆ, ಪೀತರತ್ನ, ಬೇರುಲ್ಲ, ವೈಡೂರ್ಯ, ನೀಲ, ಕೆಂಪರಲು, ಸ್ಫಟಿಕ ಈ ನವರತ್ನಗಳಿಂದ ಭೂಷಿತ (ಯೆಹೆ. 28:13).
   6) ರೆಕ್ಕೆ ತೆರೆದು ನೆರಳು ಕೊಡುವ ಕೆರೂಬಿ (ಯೆಹೆ. 28:14).
   7) ದೇವರ ಪರಿಶುದ್ಧ ಪರ್ವತದಲ್ಲಿ ನೆಲೆ (ಯೆಹೆ. 28:14).
   8) ಕೆಂಡದ ಮಳೆಯಲ್ಲಿ ವಿಹಾರ (ಯೆಹೆ. 28:14).
   9) ನಿರ್ದೋಷವಾದ ನಡತೆ ಇತ್ತು (ಯೆಹೆ. 28:15).
   10) ಉದಯನಕ್ಷತ್ರ, ಬೆಳ್ಳಿ (ಯೆಶಾ. 14:12).

3) **ಆದಾಮನ ಭೂಪರದೈಸು (ಆದಿ. 2:8). ಈ ಪರದೈಸಿನ ವಿಶೇಷತೆ :–**
   1) ಸುಂದರವಾದ ತೋಟ
   2) ನೋಟಕ್ಕೆ ರಮ್ಯವಾದ ಊಟಕ್ಕೆ ಅನುಕೂಲವಾದ ಹಣ್ಣಿನ ಮರಗಳಿದ್ದವು.
   3) ಹರಿಯುವಂತಹ ಸುಂದರವಾದ ನದಿ
   4) ನಿಷ್ಕಳಂಕ (ಪಾಪ ರಹಿತ)ನಾದ ಮನುಷ್ಯ
   5) ಶಾಪಯಿಲ್ಲದ ಭೂಮಿ
   6) ಕ್ರೂರತೆ ಇಲ್ಲದ ಪ್ರಾಣಿಗಳು
   7) ಕಷ್ಟವಿಲ್ಲದ ಜೀವಿತ
   8) ರೋಗವಿಲ್ಲದ ಮನುಷ್ಯ
   9) ದೇವರೊಂದಿಗೆ ಸಂಭಾಷಿಸುವ ಮನುಷ್ಯ
   10) ಸಂತೋಷದಿಂದಿರುವ ಮನುಷ್ಯ
   11) ದೇವರಿಗಾಗಿ ಜೀವಿಸುವ ಮನುಷ್ಯ
   12) ದೇವರ ಸ್ವರೂಪದಲ್ಲಿದ್ದ ಮನುಷ್ಯ
   13) ನೋವಿಲ್ಲದ ಜೀವಿತ
   14) ಮರಣವಿಲ್ಲದ ಜೀವಿತ.

4) ಹಳೆ ಒಡಂಬಡಿಕೆಯ ಆತ್ಮಗಳು ಇದ್ದ ಪರದೈಸು (ಹಳೆ ಒಡಂಬಡಿಕೆ ಭಕ್ತರ ಆತ್ಮಗಳು ಮರಣ ನಂತರ ವಿಶ್ರಮಿಸುವ ಸ್ಥಳ) ಆದಿ. 37:35 ರಲ್ಲಿ ಆಶ್ಚರ್ಯಪಡುವ ಒಂದು ಸಂಗತಿ ಏನೆಂದರೆ ಇಲ್ಲಿ ಅಳುತ್ತ ದು:ಖದಿಂದ ಮಾತನಾಡುವವನು ಯಾಕೋಬನು ತನ್ನ ಮಗನಾದ ಯೋಸೇಫನು ದುಷ್ಟ ಮೃಗದಿಂದ ಸೀಳಲ್ಪಟ್ಟು ಸತ್ತಿದ್ದಾನೆ ಎಂದು ತಿಳಿದುಕೊಂಡು ದು:ಖದಿಂದ ಕೆಲವು ಮಾತುಗಳನ್ನು ಹೇಳುತ್ತಿದ್ದಾನೆ. ನಾನು ಕೂಡ ಹಾಗೆಯೇ

ನನಗೆ ಪ್ರಾಪ್ತವಾಗಿರುವ ಸ್ವಾಸ್ಥ್ಯವು ರಮಣೀಯವಾದದ್ದು. ಅದು ನನಗೆ ಸಂತೃಪ್ತಿಕರವಾಗಿದೆ
ಕೀರ್ತ. 16:6.

ಸತ್ತು ನನ್ನ ಮಗನಿರುವ ಪಾತಾಳಕ್ಕೆ ಹೋಗುವೆನು ಎಂದು ಹೇಳುತ್ತಿದ್ದಾನೆ. ಇಲ್ಲಿ ನಮಗೊಂದು ಪ್ರಶ್ನೆ ಕಾಡುತ್ತದೆ. ಯಾಕೋಬನು ಹಾಗೂ ಯೋಸೇಫನು ದೇವ ದೃಷ್ಟಿಯಲ್ಲಿ ನೀತಿವಂತರೂ, ಭಕ್ತರೂ ಆಗಿದ್ದರು. ಹಾಗಾದರೆ ಯಾಕೋಬನು ಈ ಮೇಲಿನ ವಾಕ್ಯದಲ್ಲಿ ಹೇಳಿದಂತೆ ಪಾತಾಳಕ್ಕೆ ಹೋಗಬೇಕೋ ಎಂಬ ಪ್ರಶ್ನೆ ನಮಗೆ ಕಾಡುತ್ತದೆ.

ಹಳೆ ಒಡಂಬಡಿಕೆಯಲ್ಲಿ ಪಾತಾಳಕ್ಕೆ ಕೊಡಲ್ಪಟ್ಟ ಹೆಸರು ಮೂಲ ಭಾಷೆಯಾದ ಹಿಬ್ರಿಯದಲ್ಲಿ (Shiol) ಶಿಯೋಲ್ ಗ್ರೀಕ್‌ನಲ್ಲಿ (Hades) ಹೆಡ್ಸ್ ಅಂದರೆ ಭೂಮಿಯ ಮೇಲಿನ ಪದರದ ಕೆಳಗಿನ ಸಂಪೂರ್ಣವಾದ ಭಾಗಕ್ಕೆ ಪಾತಾಳ ಶಿಯೋಲ್ ಧರ್ಮೋ. 32:22 ಅಥವಾ ಹೆಡ್ಸ್ ಮತ್ತಾ. 11:23 ಎಂದು ಕರೆಯುತ್ತಾರೆ.

ಭೂಮಿಯ ಕೆಳಗಡೆ ಪಾತಾಳದಲ್ಲಿ ಮೊದಲನೆದಾಗಿ ಸಿಗುವ ಭಾಗವೇ ಹಳೆಒಡಂಬಡಿಕೆಯಲ್ಲಿ ಸತ್ತಂತಹ ದೇವ ಭಕ್ತರ ಆತ್ಮಗಳು ವಿಶ್ರಾಂತಿ ಹೊಂದುವ ಸ್ಥಳವಾಗಿತ್ತು. ಲೂಕ. 1619–31 ರಲ್ಲಿ ಮುಖ್ಯವಾದ ಎರಡು ವಿಷಯ ನೋಡುತ್ತೇವೆ. ಉಪದ್ರವ ಸ್ಥಳಕ್ಕೆ ಸತ್ತು ಹೋದಂತಹ ಐಶ್ವರ್ಯವಂತನು ಯಾತನೆ ಪಡುವಾಗ ವಿಶ್ರಾಂತಿ ಸ್ಥಳ ವನ್ನು ನೋಡಿ ಪ್ರಾರ್ಥಿಸಿದ ಪ್ರಾರ್ಥನೆ ಅದು ಆಗ ಅಬ್ರಹಾಮನು ಐಶ್ವರ್ಯವಂತನಿಗೆ ಕೊಟ್ಟಂತಹ ಉತ್ತರವು ಲೂಕ. 16:26 ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ (ಯಾತನೆಯ ಸ್ಥಳಕ್ಕೆ) ಹೋಗಬೇಕೆಂದಿರುವವರು ಹೋಗಲಾರರು ಮತ್ತು ಆ ಕಡೆಯಿಂದ (ಯಾತನೆಯ ಸ್ಥಳದಿಂದ) ನಮ್ಮ ಬಳಿಗೆ (ವಿಶ್ರಾಂತಿ ಸ್ಥಳಕ್ಕೆ) ದಾಟುವುದಕ್ಕಾಗದು ಅಂದನು. ಲೂಕ. 16:23 ರ ಪ್ರಕಾರ ಐಶ್ವರ್ಯವಂತನು ಕಣ್ಣೆತ್ತಿ ನೋಡಿ ಪ್ರಾರ್ಥಿಸಿದನು. ಅಂದರೆ ಯಾತನೆಯ ಸ್ಥಳದಿಂದ ಮೇಲಿರುವ ವಿಶ್ರಾಂತಿ ಸ್ಥಳವನ್ನು ನೋಡಿದನು ಮತ್ತು ಲೂಕ. 16:20ರಲ್ಲಿ ಅಬ್ರಹಾಮನು ಮತ್ತು ನಮ್ಮ ಮಧ್ಯೆ ದೊಡ್ಡದೊಂದು ಡೊಂಗರ (ಕಂದಕ) ಇದೆ ಎಂದು ತಿಳಿಸುತ್ತಿದ್ದಾನೆ. ಆದ್ದಕಾರಣ ಹಳೆ ಒಡಂಬಡಿಕೆಯ ಭಕ್ತರ ಆತ್ಮಗಳು ಭೂಮಿಯ ಕೆಳಗಿನ ಮೊದಲ ಭಾಗದಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದವು. ಆ ಸ್ಥಳವು ಈಗ ಬರಿದಾಗಿದೆ (ಖಾಲಿಯಾಗಿದೆ).

2) ಭೂಮಿಯ ಕೆಳಗಿನ ಎರಡನೇ ಭಾಗವೇ ಡೊಂಗರ ಅಥವಾ ಕಂದಕ ಇರುವ ಸ್ಥಳ ಇದನ್ನು ಕತ್ತಲೆಯ ಗುಂಡಿಗಳು ಕನ್ನಡದಲ್ಲಿ, ಆಂಗ್ಲದಲ್ಲಿ Darkness fit ಎಂದು ಗ್ರೀಕ್‌ನಲ್ಲಿ Tartaroo ಟರ್ಟಾರು ಎಂದು ಕರೆಯುತ್ತಾರೆ. 2 ಪೇತ್ರ. 2:4 ಇಲ್ಲಿ ಬಿದ್ದು ಹೋದ ದೇವದೂತರು ನ್ಯಾಯ ವಿಚಾರಣೆಗಾಗಿ ಸೆರೆಯಲ್ಲಿಡಲ್ಪಟ್ಟಿದ್ದಾರೆ.

3) ಭೂಮಿಯ ಕೆಳಗಿನ 3ನೇ ಭಾಗವೇ ಯಾತನೆಯ ಸ್ಥಳ ಅಥವಾ torment place ಎಂದು ಕರೆಯುತ್ತಾರೆ. ಆದಿಕಾಂಡದಿಂದ ಪ್ರಕಟನೆಯವರೆಗೆ ಸತ್ತಂತಹ ದುಷ್ಟರ ಅಥವಾ ನಾಶವಾದಂತಹ ನಿತ್ಯನರಕಕ್ಕೆ ಹೋಗುವಂತಹ ಆತ್ಮಗಳಿರುವ ಸ್ಥಳವೇ ಯಾತನೆಯ ಅಥವಾ ಉಪದ್ರವದ ಸ್ಥಳ ಈ ಸ್ಥಳಕ್ಕೆ ಯಾರು ಹೋಗುತ್ತಾರೆ? ರಕ್ಷಣೆ ಹೊಂದದ ಪ್ರತಿಯೊಂದು ಆತ್ಮಗಳು ಈ ಸ್ಥಳಕ್ಕೆ ಹೋಗುತ್ತಾರೆ. ರಕ್ಷಣೆ ಅಂದರೇನು ಪಾಪದಲ್ಲಿ ಹುಟ್ಟಿ ಬೆಳೆದು ಪಾಪ ಮಾಡಿದ ಮನುಷ್ಯನು ಪಾಪದ ಶಿಕ್ಷೆಯಾದ ನರಕಕ್ಕೆ ಶರೀರ ಬಿಟ್ಟ ನಂತರ ಹೋಗಬೇಕಾಗಿತ್ತು. ಈ ನರಕದ ಶಿಕ್ಷೆಯು ನಿತ್ಯ ನಿತ್ಯಕ್ಕೂ ವಿಧಿಸಲ್ಪಟ್ಟಿತ್ತು. ಅದರಿಂದ ಮನುಷ್ಯನಿಗೆ ಬಿಡುಗಡೆ ಇರಲಿಲ್ಲ. ಆದರೆ ತಂದೆಯಾದ ದೇವರು ಎರಡು ಸಾವಿರ ವರ್ಷಗಳ ಹಿಂದೆ ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಮನುಷ್ಯ ರೂಪದಲ್ಲಿ ಈ ಲೋಕಕ್ಕೆ ಕಳುಹಿಸಿಕೊಟ್ಟನು. ದೇವರ ಮಗನಾದ ಯೇಸುಕ್ರಿಸ್ತನು ಶಿಲುಬೆಯಲ್ಲಿ ಪ್ರಾಣಕೊಟ್ಟು ಮನುಷ್ಯನ ಪಾಪದ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡನು ಇಂದು ಯಾರೆಲ್ಲಾ ಪಾಪಕ್ಕೆ ಪಶ್ಚಾತ್ತಾಪಪಟ್ಟು ತಮ್ಮ ಪಾಪಗಳನ್ನು ದೇವರ ಮುಂದೆ ಅರಿಕೆ ಮಾಡಿ ಬಿಟ್ಟು ಬಿಟ್ಟು ಯೇಸುಕ್ರಿಸ್ತನು ನನಗಾಗಿ ಸತ್ತು ನನಗಾಗಿ ಹೂಣಲ್ಪಟ್ಟು ನನಗಾಗಿ ಮೂರನೆಯ ದಿನದಲ್ಲಿ ಎದ್ದು ಬಂದನು ಎಂದು ನಂಬುತ್ತಾರೋ ಹಾಗೂ ಆತನೇ ನನ್ನ ರಕ್ಷಕನು ಒಡೆಯನೆಂದು ಅಂಗೀಕರಿಸಿ ಕೊಳ್ಳುತ್ತಾರೋ ಅವರಿಗೆ ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಸಿಗುತ್ತದೆ ಇದೇ ಯೇಸುಕ್ರಿಸ್ತನು ಕೊಡುವ ರಕ್ಷಣೆಯಾಗಿದೆ. ಈ ಸ್ಥಳಕ್ಕೆ ಹೋದಂತಹ ಯಾರಿಗೂ ನಿರೀಕ್ಷೆ ಇಲ್ಲಾ ಈ ಸ್ಥಳದ ಅವಧಿಯು ಕೊನೆ ಬಿಳಿ ಸಿಂಹಾಸನದ ನ್ಯಾಯತೀರ್ಪಿನವರೆಗೆ ಈ ಸ್ಥಳದಲ್ಲಿ ಯಾತನೆ ಲೂಕ. 16:22–26 ಮತ್ತು ನರಕಕ್ಕೆ ಹೋದ ಮೇಲೂ ಯಾತನೆಯನ್ನು ಮನುಷ್ಯನು ಅನುಭವಿಸಬೇಕು ಅದಕ್ಕಾಗಿ ಈಗಲೇ ಜೀವದಿಂದಿರುವಾಗಲೇ ಮಾನಸಾಂತರಪಟ್ಟು ಕರ್ತನಾದ ಯೇಸುಕ್ರಿಸ್ತನನ್ನು ನಿಮ್ಮ ರಕ್ಷಕನಾಗಿ ಅಂಗೀಕರಿಸಿಕೊಳ್ಳಿರಿ ಸತ್ತ ನಂತರ ನಂಬಿಕೆ ಹಾಗೂ ನಿರೀಕ್ಷೆ ಎಂಬುವಂತದ್ದು ಇರುವುದಿಲ್ಲ. **ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹ ಮಾಡಿರಿ. ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾಕೃಪೆಯಿಂದ ಕ್ಷಮಿಸುವನು** (ಯೆಶಾ. 55:6–7).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಉನ್ನತ ಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನೂ ಜಜ್ಜಿಹೋದ ಮನಸ್ಸನ್ನು ಉಜ್ಜೀವಿಸುವವನಾಗಿದ್ದೇನೆ ಯೆಶಾ. 57:15.

# ಕಾಪಾಡಿಕೊಳ್ಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ"** (ರೋಮ. 16:17). ಪೌಲನು ತಿಮೊಥಿಯನಿಗೆ ಬರೆಯುತ್ತಾನೆ, **"ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ"** (1 ತಿಮೊ. 4:16).

3) ನಂಬಿಕೆಯನ್ನು ಕಾಪಾಡಿಕೊಳ್ಳಬೇಕು (ಯೂದ. 1:3). ಯೂದನು ಬರೆಯುತ್ತಾನೆ, **"ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವುದಕ್ಕೆ ನೀವು ಹೋರಾಡಬೇಕೆಂದು ಎಚ್ಚರಿಸಿ ಬರೆಯುವದು ಅವಶ್ಯವೆಂದು ತೋಚಿತು"**. ಹೌದು ದೇವ ಮಗುವೆ ನಂಬಿಕೆಯನ್ನು ಕಾಪಾಡಿಕೊಳ್ಳಬೇಕಾದರೆ ಪರಿಶೋಧನೆಯೆಂಬ ಪುಟಕ್ಕೆ ಹಾಕಲ್ಪಡುತ್ತೇವೆ. ದೇವರು ಹೇಳುತ್ತಾನೆ, **"ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು"** (ಇಬ್ರಿ. 10:38). ಪೇತ್ರನಿಗೆ ಬರುವ ಶೋಧನೆಯ ವಿಷಯದಲ್ಲಿ ಯೇಸು ಮುಂಚಿತವಾಗಿ ತಿಳಿಸಿದ್ದು ಮಾತ್ರವಲ್ಲ ಅವನ ನಂಬಿಕೆಯು ಕುಂದಿಹೋಗಬಾರದೆಂದು ವಿಜ್ಞಾಪನೆ ಕೂಡಾ ಮಾಡಿದ್ದರು (ಲೂಕ. 22:31–32). ಪೌಲನು ಬರೆಯುತ್ತಾನೆ, **"ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ಬಿಡದೆ ಹಿಡಿದುಕೋ. ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟಪಟ್ಟವರಂತೆ ಇದ್ದಾರೆ"** (1 ತಿಮೊ. 1:19). ಹಡಗು ಒಡೆದು ನೀರು ಒಳಗೆ ಬರುವುದಾದರೆ ಹಡಗಿನಲ್ಲಿರುವ ಎಲ್ಲಾ ಬೆಲೆಬಾಳುವ ವಸ್ತುಗಳೆಲ್ಲಾ ನಾಶವಾಗಿ ತುಂಬಾ ನಷ್ಟವಾಗುವುದು. ಇಂದು ಅನೇಕರು ಮನಸಾಕ್ಷಿಗೆ ವಿರುದ್ಧವಾಗಿ ಜೀವಿಸಿ ಚುಚ್ಚಲ್ಪಟ್ಟ ಮನಸ್ಸಾಕ್ಷಿಯೊಂದಿಗೆ ನಂಬಿಕೆಯನ್ನೂ ಕಳೆದುಕೊಂಡವರಾಗಿ ಹಡಗು ಒಡೆಯಲ್ಪಟ್ಟವರಂತೆ ಇರುತ್ತಾರೆ. **"ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವುದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವುದು"** (ಕೊಲೊ. 1:23). ಇನ್ನು ಕೆಲವರು ಹಣದಾಶೆಯ ನಿಮಿತ್ತವು ಕೂಡಾ ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಳ್ಳದೆ ಅದನ್ನು ಬಿಟ್ಟು ಅನೇಕ ವೇದನೆಗಳಿಂದ ತಿವಿಸಿಕೊಳ್ಳುವರು (1 ತಿಮೊ. 6:10). ಇನ್ನು ಕೆಲವರು ಸುಳ್ಳಾದ ಜ್ಞಾನದ ಹಿಂದೆ ಹೋಗಿ (ಅವಲಂಬಿಸಿ) ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರು (1 ತಿಮೊ. 6:21). ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಳ್ಳಲು ನಾವು ಶ್ರೇಷ್ಟವಾದ ಹೋರಾಟವನ್ನು ಹೋರಾಡಬೇಕಾಗಿದೆ (1 ತಿಮೊ. 6:12). ಶ್ರೇಷ್ಟ ಅಪೋಸ್ತಲನಾದ ಪೌಲನು ತಾನು ಹೊರಟು ಹೋಗಬೇಕಾದ ಸಮಯ ಸಮೀಪಿಸುತ್ತಿರುವಾಗ ಮಾತುಗಳನ್ನು ಗಮನಿಸುವಿಯಾದರೆ **"ಶ್ರೇಷ್ಟಹೋರಾಟ ಮಾಡಿದ್ದೇನೆ. ನನ್ನ ಓಟ ಕಡೆಗಾಣಿಸಿದ್ದೇನೆ ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ. ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ"** (2 ತಿಮೊ. 4:7). ನಮ್ಮ ನಂಬಿಕೆಯು ಬಂಗಾರದ ಹಾಗೆ ಪುಟಕ್ಕೆ ಹಾಕಿ ಪರೀಕ್ಷಿಸುವಂತದ್ದಾಗಿದೆ. ದೇವರ ವಾಕ್ಯ ತಿಳಿಸುತ್ತದೆ, ಬಂಗಾರಕ್ಕಿಂತ ಅಮೂಲ್ಯವಾದ ನಮ್ಮ ನಂಬಿಕೆಯು ಕಷ್ಟಗಳಿಂದ ಶೋಧಿಸಲ್ಪಡುವುದು. (1 ಪೇತ್ರ. 1:7). ನಿಜವಾದ ಬಂಗಾರವು ಬೆಂಕಿಯ ಕುಲುಮೆಯಲ್ಲಿ ಹಾಕಲ್ಪಟ್ಟಾಗ ಇನ್ನೂ ಹೆಚ್ಚಾಗಿ ಹೊಳಪು ನೀಡಿದ ಹಾಗೆ ಕಷ್ಟ ಸಂಕಟಗಳಿಂದ ನಮ್ಮ ನಂಬಿಕೆಯೂ ಕೂಡಾ ಶೋಧಿಸಲ್ಪಟ್ಟು ಕೀರ್ತ, ಪ್ರಭಾವ ಮಾನವನ್ನುಂಟು ಮಾಡುತ್ತದೆ. ಮಾತ್ರವಲ್ಲದೆ ನಂಬಿಕೆಕ್ಕಾಗಿ ಶೋಧಿಸಲ್ಪಡುವಾಗ ಅದರ ಮೂಲಕ ನಾವು ತಾಳ್ಮೆಯನ್ನು ಕಲಿಯುವವರಾಗುತ್ತೇವೆ. (ಯಾಕೋ. 1:23). "ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ" (ರೋಮ. 5:4). ನಮ್ಮ ನಂಬಿಕೆಯು ಬರೀ ಮಾತಿನಿಂದ ಮಾತ್ರಬಾರದೆ ಅದು ಕ್ರಿಯೆಗಳಿಂದ ಬರಬೇಕಾಗಿದೆ. ಕ್ರಿಯೆಗಳಿಲ್ಲದೆ ನಂಬಿಕೆ ಸತ್ತದಾಗಿದೆ (ಯಾಕೋ. 2:17).

**ವಯಸ್ಕರ ಸ್ವರ**

1) ದೋಷವಿಲ್ಲದೆ ಕಾಪಾಡು (1 ಥೆಸ. 5:23) ಆತ್ಮ, ಪ್ರಾಣ, ಶರೀರ ದೋಷವಿಲ್ಲದೆ ಕಾಪಾಡು. ಮನುಷ್ಯನಲ್ಲಿ 3 ಮುಖ್ಯ ಭಾಗಗಳು ಮೊದಲನೆಯದಾಗಿ ಆತ್ಮ (ಇದಕ್ಕೆ ಸಾವಿಲ್ಲ) ಆತ್ಮ ದೇವರೊಂದಿಗೆ ನೇರ ಸಂಪರ್ಕ ಹೊಂದುವ ಭಾಗವಾಗಿದೆ. ಎರಡನೆಯದಾಗಿ ಪ್ರಾಣ ಅಥವಾ ಹೃದಯ ಅಥವಾ ಮನಸ್ಸು ಎಂದು ಕರೆಯಲ್ಪಡುವಂಥದ್ದು ಇಲ್ಲೇ ಮನುಷ್ಯನ ಅಭಿಲಾಷೆಗಳು, ಭಾವನೆಗಳು, ಆಲೋಚನೆಗಳು ಅಥವಾ ಪಾಪಕ್ಕೆ ಒಳಪಡಿಸುವ ಯೋಚನೆಗಳು ಇಲ್ಲೇ ಹುಟ್ಟುವಂತದ್ದು. ಮೂರನೆಯದಾಗಿ ಶರೀರ ಇದು ಭೌತಿಕ ಭಾಗವಾಗಿದೆ. ಇದು ಆತ್ಮ, ಪ್ರಾಣಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡುವುದಾಗಿದೆ. **"ಕ್ರಿಸ್ತಯೇಸುವಿನರವರು ಶರೀರವನ್ನು ಅದರ ಸ್ವೇಚ್ಛೆಯನ್ನು ಶಿಲುಬೆಗೆ ಹಾಕಿಸಿಕೊಂಡವರಾಗಿರಬೇಕು"** (ಗಲಾತ್ಯ. 5:24). ದೇವ ಮಕ್ಕಳು ಶರೀರವನ್ನು ಅನುಸರಿಸಿ ಜೀವಿಸದೆ ಆತ್ಮವನ್ನು

ಆತನು ದೇವಸ್ವರೂಪನಾಗಿದ್ದರೂ, ದೇವರಿಗೆ ಸಮಾನವಾಗಿರುವ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ, ತನ್ನನ್ನು ಬರಿದು ಮಾಡಿಕೊಂಡು ಮನುಷ್ಯರಿಗೆ ಸದೃಶನಾದನು ಫಿಲಿ. 2:6.

ಅನುಸರಿಸುವವರಾಗಿರಬೇಕು. ಏಕೆಂದರೆ ಶರೀರಾಭಾವದೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು (ರೋಮ. 8:8). ಇದನ್ನು ಆತ್ಮನ ಅಧೀನಕ್ಕೆ ಒಳಪಡಿಸಬೇಕಾಗಿದೆ ಆತ್ಮ, ಪ್ರಾಣ, ಶರೀರವು ದೋಷವಿಲ್ಲದೆ ಕಾಪಾಡಬೇಕಾಗಿದೆ. **"ಹೀಗಿರುವುದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಅಳಗೋಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ"** (ರೋಮ. 6:12). ಪ್ರಿಯ ದೇವ ಮಗುವೆ ಕ್ರಿಸ್ತನು ಬರುತ್ತಾನೆ, ಬರುವಾತನು ಇನ್ನು ತಡಮಾಡುವುದಿಲ್ಲ. ನಿನ್ನನ್ನು ನೀನು ಸಿದ್ಧಪಡಿಸಿ ಆತನ ಬರೋಣದಲ್ಲಿ ಪಾಲುಗೊಳ್ಳಲು ಸಿದ್ಧನಾಗಿರು. **"ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವುದಕ್ಕೆ ಪ್ರಯತ್ನಿಸೋಣ"** (2 ಕೊರಿ. 7:1).

ಕೃಪಾಪೂರ್ಣನಾದ ದೇವರು ಆಶೀರ್ವಾದಿಸಲಿ.

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**

ಬೇತೇಲ್ ಚರ್ಚ್.

## ಪ್ರಾರ್ಥನಾ ಮನವಿಗಳು

* ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸಿ ವಿಶಾಲತೆಗೆ ನಡೆಸುವಂತೆ ಪ್ರಾರ್ಥಿಸಿರಿ.
* ದೇಶದಲ್ಲಿ ನೀರಿನ ಕೊರತೆ, ವಿದ್ಯುತ್ ಕೊರತೆ ಉಂಟಾಗದಂತೆ ಪ್ರಾರ್ಥಿಸಿರಿ.
* ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸಿರಿ.
* ದೇಶದಲ್ಲಿ 0ಯಾವುದೇ ಅಂಟುರೋಗಗಳು ಬರದಂತೆ (ಹರಡದಂತೆ) ಪ್ರಾರ್ಥಿಸಿರಿ (0ಯೆಶಾ. 60:18).
* ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಮಕ್ಕಳು ಉತ್ತಮವಾಗಿ ಬರೆಯಲು ಬೇಕಾದ ಜ್ಞಾನವನ್ನು ಕರ್ತನು ದಯಪಾಲಿಸುವಂತೆ ಪ್ರಾರ್ಥಿಸಿರಿ.
* ಪರೀಕ್ಷೆಯ ಸಮಯದಲ್ಲಿ ಮಕ್ಕಳಿಗೆ ಯಾವುದೇ ಅನಾರೋಗ್ಯಗಳು ಬಾರದಂತೆ ಪ್ರಾರ್ಥಿಸಿರಿ.

## ನಮ್ಮೊಂದಿಗೆ ಆಚರಿಸಿ




**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ಸಿಂಹಾಸನದ ಮಧ್ಯದಲ್ಲಿರುವ ಯಜ್ಞದ ಕುರಿಯಾದಾತನು ಅವರಿಗೆ ಕುರುಬನಂತಿದ್ದು ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ ಪ್ರಕ. 7:17.

# ವಿಶೇಷ ಸೂಚನೆಗಳು :

ಮಾರ್ಚ್ 2–3ನೇ ತಾರೀಖು ಶನಿವಾರ ಮತ್ತು ಭಾನುವಾರ ಕುವೈಟ್‌ದಿಂದ ಪಾ॥ ದೀಪಕ್ ಶರ್ಮಾ ಮತ್ತು ತಂಡದವರು ಬೇತೇಲ್ ಚರ್ಚ್‌ಗೆ ಬಂದು 2 ದಿವಸದ ಕೂಟವನ್ನು ನಡೆಸಿಕೊಡಲಿದ್ದಾರೆ. ಈ ದೇವ ಸೇವಕರನ್ನು ದೇಶ ವಿದೇಶಗಳಲ್ಲಿ ದೇವರು ಬಲವಾಗಿ ಉಪಯೋಗಿಸುತ್ತಿದ್ದಾನೆ ಹಾಗೂ ಇವರ ಮೂಲಕ ಅನೇಕ ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದಾನೆ. (ರೋಗಿಗಳು ಸೌಖ್ಯ ಹೊಂದುವುದು, ದುರಾತ್ಮ ಪೀಡಿತರು ಬಿಡುಗಡೆಯಾಗುವುದು, ಅನೇಕರು ಪವಿತ್ರಾತ್ಮನಿಂದ ತುಂಬಿಸಲ್ಪಡುವುದು) ನೀವೆಲ್ಲರೂ ಬನ್ನಿ ಮತ್ತು ಇತರರನ್ನು ಈ ಕೂಟಕ್ಕೆ ಕರೆದುಕೊಂಡು ಬನ್ನಿ ತಮ್ಮೆಲ್ಲರಿಗೂ ಆದರದ ಸ್ವಾಗತ.

2013 ಮೇ 20–25ರ ವರೆಗೆ 6 ದಿವಸದ ಸ್ಕೂಲ್ ಆಫ್ ವರ್‌ಶಿಪ್ ಡಿಜಿಎಂ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ಶೀಘ್ರವಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ನೊಂದಾವಣೆ ಶುಲ್ಕ 750/– ರೂಪಾಯಿ ಇದನ್ನು ನಡೆಸಿಕೊಡುವವರು ಪಾ॥ ಜಯಶೀಲನ್ ಹಾಗೂ ತಂಡದವರು. (11*24 ದಿವಸ ನಿರಂತರ ಆರಾಧನೆ ಮಾಡಿ ಗಿನ್ನಿಸಿ ದಾಖಲೆಗೊಂಡ ಸೇವಕರು).

ಜುಲೈ 2013 18ರಿಂದ 20ರವರೆಗೆ 3 ದಿನದ ಯೌವನಸ್ಥರಿಗಾಗಿ (ಶಕ್ತಿಯ ಕೂಟಗಳು) ಯೂತ್ ಪವರ್ ಕಾನ್ಫರೆನ್ಸ್ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವದು ಈ ಕೂಟದಲ್ಲಿ ಯೇಶು ಮೇರಾ ಬಾಹಿ ಸಿ.ಡಿ.ಯ ಹಾಡನ್ನು ಹಾಡಿದ ಪಾ॥ ಅಜಯ್ ಚೋವಾ, ಪಾ॥ ಜಾನ್‌ಸನ್ ವರ್ಗಿಸ್ (ಬೇತೇಲ್ ಎ.ಜಿ. ಚರ್ಚ್ ಬೆಂಗಳೂರು) ಹೆಬಿಕ್ ಸೈಮನ್ (ಕೇರಳ) ಪಾ॥ ನೆಹೆಮೀಯ (ಚನ್ನೈ) ಸಹೋ॥ ಕೃಪಾ (ಚನ್ನೈ) ಈ ಎಲ್ಲಾ ದೇವ ಸೇವಕರುಗಳು ಈ ಕೂಟದಲ್ಲಿ ಬಂದು ಸೇವೆಮಾಡಲಿದ್ದಾರೆ. ಈ ಕೂಟದಲ್ಲಿ ಭಾಗವಹಿಸಲ್ಚಿಸುವವರು ನಿಮ್ಮ ನೊಂದಾವಣೆಯನ್ನು ಶೀಘ್ರವಾಗಿ ಮಾಡಿಕೊಳ್ಳಿ. ನೊಂದಾವಣೆಯ ಶುಲ್ಕ ಊಟ, ವಸತಿ 500/– ಬಂದು ಹೋಗುವವರಿಗೆ 350/–.

ನಮ್ಮ ಮನಸ್ಸು ಯೆಹೋವನಿಗೋಸ್ಕರ ಕಾದಿದೆ ನಮ್ಮ ಸಹಾಯವೂ ಗುರಾಣಿಯೂ ಆತನೇ
ಕೀರ್ತ. 33:20.

## ಕವನ

ನನ್ನ ಜೀವನಾದರ ಯೇಸು
ನನ್ನ ಕುಟುಂಬಕ್ಕೆ ಅವರೇ ಬಾಸ್
ನಾನು ಕಾಣುವೆ ಅವರ ಕನಸು
ಅವರು ನೋಡುವರು ನನ್ನ ಮನಸ್ಸು
ನನಗೆ ನೀಡುವರು ಶ್ರೇಯಸ್ಸು
ಜೀವನದಲ್ಲಿ ಯಾವಾಗಲೂ ಯಶಸ್ಸು
ಸಭೆಯೆಂಬ ದೇಹಕ್ಕೆ ಶಿರಸ್ಸು.

ಯೇಸುವೆ ನನ್ನ ಉಸಿರು
ನನ್ನ ಬಾಳಿಗೆ ಅವರೇ ಹಸಿರು
ನನ್ನನ್ನು ಕಾಯುವ ದೇವರು
ಯಾವಾಗಲೂ ಬೆಳಕಾಗಿ ಇರುವರು.

ನನ್ನ ಕಣ್ಣೀರು ಬಲ್ಲಾತನು
ಒರೆಸುವ ನನ್ನ ಕರ್ತನು
ಆತನು ನನ್ನನ್ನು ಕೈ ಬಿಡನು
ನಾ ಕೂಗಿದರೆ ಓಡಿ ಬರುವನು
ನಾ ಆತನ ಮರೆತರೆ ದು:ಖಿಸುವೆನು
ನಾ ಆತನಿಗಾಗಿ ಬಾಳುವೆನು.

– ಸಹೋ ॥ ಸಂಗೀತ
ಮಲ್ಪೆ.

---

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

ಯೆಹೋವನೇ, ನನ್ನ ಮೊರೆಯನ್ನು ಲಾಲಿಸು ನಿನ್ನ ಕೃಪೆಯು ಶುಭಕರವಾಗಿದೆಯಲ್ಲಾ
ಕೀರ್ತ. 69:16.

ಆರೋಗ್ಯ ಸ್ವರ

# 'ತುಳಸೀ' ಎಂಬ ಸುಲಭೌಷಧಿ !

ಮನೆಯಂಗಳದಲ್ಲಿ ವೃಂದಾವನದಲ್ಲಿ ಪೂಜಿಸಲ್ಪಡುವ ತುಳಸೀ ಅಥವಾ 'ಹೋಲಿ ಬೆಸಿಲ್' ಎಂದು ಕರೆಯಲಾಗುವ, ಈ ವನಸ್ಪತಿ ಹತ್ತು ಹಲವು ರೋಗಗಳಿಗೆ ಮನೆಯಲ್ಲೇ ಸುಲಭವಾಗಿ ಮದ್ದು ತಯಾರಿಸಬಹುದಾದ ಸಿದ್ಧೌಷಧಿ!

ತುಳಸಿಯಲ್ಲಿ ಎರಡು ವಿಧಗಳಿದ್ದು ಬಿಳಿ (ರಾಮ ತುಳಸಿ) ಹಾಗೂ ಕಪ್ಪು (ಕೃಷ್ಣ ತುಳಸಿ) ಇದರಲ್ಲಿ ಕಪ್ಪು ಬಗೆಯ ತುಳಸಿ ಹೆಚ್ಚು ಔಷಧೀಯ ಗುಣಗಳನ್ನು ಹೊಂದಿದೆ. ತುಳಸಿಯು ಕಫ ಮತ್ತು ವಾತಶಾಮಕ.

ತುಳಸಿಯ ಮನೆಮದ್ದುಗಳು

* 1–2 ಚಮಚದಷ್ಟು ತುಳಸಿಯ ರಸಕ್ಕೆ ಅರ್ಧ ಚಮಚ ಜೇನು ಬೆರೆಸಿ ನೀಡಿದರೆ ಪುಟ್ಟ ಮಕ್ಕಳ ನೆಗಡಿ, ಕೆಮ್ಮು ಕಫ ಶಮನವಾಗುತ್ತದೆ.
* ತುಳಸಿಯ ರಸ, ಹಸಿಶುಂಠಿರಸ ಹಾಗೂ ಜೇನು ಸಮಪ್ರಮಾಣದಲ್ಲಿ ಬೆರೆಸಿ 2–4 ಚಮಚದಷ್ಟು ಸೇವಿಸಿದರೆ ವಯಸ್ಕರಲ್ಲಿ ಕೆಮ್ಮು ದಮ್ಮು ಕಫ ಶಾಮಕವಾಗಿದೆ.
* ತುಳಸಿಯ ಬೇರು ಜಜ್ಜಿ, ಎಲೆಯೊಂದಿಗೆ ಹಾಕಿ ಕುದಿಸಿ ಸೋಸಿ ಈ ಕಷಾಯ ಅರ್ಧ ಕಪ್‌ನಂತೆ ದಿನಕ್ಕೆ 2–3 ಬಾರಿ ಸೇವಿಸಿದರೆ ಜ್ವರ, ಚಳಿಯುಕ್ತ ಜ್ವರ ಗುಣವಾಗುತ್ತದೆ.
* ಥಂಡಿ, ಕೆಮ್ಮುಯುಕ್ತ ಜ್ವರ, ಫ್ಲೂಜ್ವರ ಮುಂತಾದವುಗಳಲ್ಲಿ ತುಳಸಿಯ ಎಲೆ, ಜೀರಿಗೆ, ಗಂಧ'ಮೆಣಸು (ಬಾಲಮೆಣಸಿನಕಾಯಿ) ಕಾಳು ಮತ್ತು ಬೆಲ್ಲ ಬೆರೆಸಿ ಅರೆದು ದಿನಕ್ಕೆ 2–3 ಬಾರಿ ಸೇವಿಸಿದರೆ ಶಮನಕಾರಿ.
* ಗಾಯ, ವ್ರಣ ಉಂಟಾದಾಗ ತುಳಸಿಯರಸ ಮತ್ತು ಅರಿಸಿನ ಹುಡಿ ಬೆರೆಸಿ ಲೇಪಿಸಿದರೆ ಗುಣಕಾರಿ.
* ತುರಿಕೆ ಕಜ್ಜಿ, ಗಜಕರ್ಣ ಮುಂತಾದ ಚರ್ಮದ ತೊಂದರೆಗಳಲ್ಲಿ ತುಳಸಿಯ ಎಲೆಯ ರಸ, ಅರಸಿನಪುಡಿ ಹಾಗೂ ಉಪ್ಪುಬೆರೆಸಿ ಲೇಪಿಸಿದರೆ ಗುಣಕಾರಿ.
* ತುಳಸಿಯ ರಸ, ಕೊತ್ತಂಬರಿ ಎಲೆಯ ರಸ ಮತ್ತು ಜೇನು ಬೆರೆಸಿ ಲೇಪಿಸಿದರೆ ಮೊಡವೆ, ಗುಳ್ಳೆಗಳು ಮಾಯುತ್ತವೆ.
* ತುಳಸಿಯ ಎಲೆಯೊಳಗೆ ಉಪ್ಪು, ಮೆಣಸಿನಕಾಳನ್ನು ಸುತ್ತಿ ಅದನ್ನು ಹಲ್ಲುನೋವಿರುವ ಭಾಗದಲ್ಲಿರಿಸಿ, ನಿಧಾನವಾಗಿ ಜಗಿದು ರಸ ಹೀರುತ್ತಿದ್ದರೆ, ಹಲ್ಲುನೋವು, ವಸಡಿನ ಊತ ಶಮನವಾಗುತ್ತದೆ.
* ತಲೆನೋವು ಅರೆ ತಲೆಶೂಲೆ ಮುಂತಾದವುಗಳಲ್ಲಿ ತುಳಸಿಯ ಎಲೆಯ ರಸವನ್ನು 2–5 ಹನಿಗಳಷ್ಟು ಎರಡೂ ಮೂಗಿನ ಹೊಳ್ಳೆಗಳಲ್ಲಿ ನಿತ್ಯವೂ ಹಾಕಿದರೆ ಹಾಗೂ ತುಳಸಿಯ ಎಲೆಯರಸ ಮತ್ತು ದಾಲ್ಚೀನಿಯ ಹುಡಿಯನ್ನು ಬೆರೆಸಿ ಹಣೆಗೆ ಪಟ್ಟಿ ಹಾಕಿದರೆ ತಲೆನೋವು, ಅರೆತಲೆಶೂಲೆ ಪರಿಹಾರವಾಗುತ್ತದೆ.
* ನಿತ್ಯ ಶುದ್ಧ ತಾಮ್ರದ ಪಾತ್ರೆಯಲ್ಲಿ ರಾತ್ರಿ ನೀರು ಹಾಕಿಟ್ಟು ಅದರಲ್ಲಿ 5–6 ತುಳಸಿಯ ಎಲೆಗಳನ್ನು ಹಾಕಿಡಬೇಕು. ಮರುದಿನ ಬೆಳಿಗ್ಗೆ ಇದನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ಮಕ್ಕಳಲ್ಲಿ ಬುದ್ಧಿಮತ್ತೆ, ಸ್ಮರಣಶಕ್ತಿ ವರ್ಧಿಸುತ್ತದೆ.
* ಗಂಟಲುನೋವು, ಟಾನ್ಸಿಲ್‌ಗಳ ಸೋಂಕು ಉಂಟಾದಾಗ ಬೆಚ್ಚಗಿನ ನೀರಿಗೆ ತುಳಸಿಯರಸ ಮತ್ತು ಉಪ್ಪು ಬೆರೆಸಿ ಗಂಟಲು ಮುಕ್ಕಳಿಸಿದರೆ (ಗಾರ್ಗಲ್ ಮಾಡಿದರೆ) ಶಮನಕಾರಿ. ದಿನಕ್ಕೆ 5–6 ಬಾರಿ.
* ಹೊಟ್ಟೆನೋವು, ಅಜೀರ್ಣದಿಂದ ಭೇದಿ ಉಂಟಾದಾಗ 15 ತುಳಸಿಯ ಎಲೆಗಳನ್ನು ಅರ್ಧ ಚಮಚ ಜೀರಿಗೆಯೊಂದಿಗೆ ಅರೆದು 1 ಚಮಚ ಜೇನು ಬೆರೆಸಿ ನೀಡಿದರೆ ಶಮನಕಾರಿ.
* ಸಂಧಿಶೂಲ, ಊತ ಇರುವ ಸಂದರ್ಭದಲ್ಲಿ ತುಳಸಿಯ ಸುಖೋಷ್ಣ ಕಷಾಯದಿಂದ ಆ ಭಾಗಕ್ಕೆ ಶಾಖ ನೀಡಿದರೆ ಹಾಗೂ ತುಳಸಿಯ ಕಷಾಯಕ್ಕೆ ಹಾಲು ಬೆರೆಸಿ ದಿನಕ್ಕೆ ಎರಡು ಬಾರಿ ನಿತ್ಯ ಸೇವಿಸಿದರೆ ಸಂಧಿಶೂಲ ಹಾಗೂ ಊತ ಶಮನವಾಗುತ್ತದೆ.
* ಹೆರಿಗೆಯ ಬಳಿಕ ಬಾಣಂತಿ ಸ್ತ್ರೀಯರಲ್ಲಿ ಹೊಟ್ಟೆನೋವು ಕಂಡುಬಂದರೆ ತುಳಸಿಯ ಎಲೆಯ ರಸಕ್ಕೆ ಕೆಂಪು ಕಲ್ಲುಸಕ್ಕರೆ ಪುಡಿ ಬೆರೆಸಿ ಸೇವಿಸಲು ನೀಡಿದರೆ ಶಮನಕಾರಿ.
* ಕಿವಿನೋವಿಗೆ ಕೊಬ್ಬರಿ ಎಣ್ಣೆ, ಬೆಳ್ಳುಳ್ಳಿರಸದೊಂದಿಗೆ ತುಳಸೀ ಎಲೆಯ ರಸ ಬೆರೆಸಿ, ಮೂರು ಹನಿಗಳಷ್ಟು ಹಾಕಿದರೆ ನೋವು ಶಮನವಾಗುತ್ತದೆ.
* ದೃಷ್ಟಿದೋಷಕ್ಕೆ ತಾಜಾ ತುಳಸಿಯ ಎಲೆಯ ರಸವನ್ನು ಎರಡು ಹನಿಗಳಷ್ಟು ದಿನಕ್ಕೆ 2–3 ಬಾರಿ ಹಾಕಿದರೆ ದೃಷ್ಟಿದೋಷ ನಿವಾರಣೆಯಾಗುತ್ತದೆ.
* ತುಳಸಿಯ ಎಲೆಗಳನ್ನು ನೆರಳಲ್ಲಿ ಒಣಗಿಸಿ ಪುಡಿಮಾಡಿ, ಅದಕ್ಕೆ ಗುಲಾಬಿ ಜಲ ಬೆರೆಸಿ ಮುಖಕ್ಕೆ ಲೇಪಿಸಿದರೆ, ಕಲೆ, ಗುಳ್ಳೆಗಳು ನಿವಾರಣೆಯಾಗುತ್ತದೆ ಹಾಗೂ ಮುಖದ ಕಾಂತಿಯೂ ವರ್ಧಿಸುತ್ತದೆ.
* ತುಳಸಿಯ ಒಣಗಿದ ಎಲೆ ಮತ್ತು ಬೀಜದ ಚೂರ್ಣವನ್ನು ಹಾಲಿನಲ್ಲಿ ಅರ್ಧ ಚಮಚ ಬೆರೆಸಿ, ಜೇನುತುಪ್ಪ ಮತ್ತು ತುಪ್ಪಬೆರೆಸಿ ಸೇವಿಸಿದರೆ ದೇಹಕ್ಕೆ ಶಕ್ತಿ ನೀಡುವ ಮನಸ್ಸಿಗೆ ಆಹ್ಲಾದ ನೀಡುವ ಉತ್ತಮ ಟಾನಿಕ್.

– ಸಂಗ್ರಹ.

ಯೆಹೋವನು ಒಬ್ಬನ ನಡತೆಗೆ ಮೆಚ್ಚಿದರೆ ಅವನ ಶತ್ರುಗಳನ್ನೂ ಮಿತ್ರರನ್ನಾಗಿ ಮಾಡುವನು

ಜ್ಞಾನೋ. 16:7.

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಹಾಗೆಯೇ ಇಂದು ದೇವಜನರಾದ ನಾವೆಲ್ಲರೂ ನಮ್ಮ ತಪ್ಪುಗಳಿಗಾಗಿ, ಪಾಪಕೃತ್ಯಗಳಿಗಾಗಿ, ದುರ್ನಡತೆಗಾಗಿ ಪಶ್ಚಾತ್ತಾಪಪಟ್ಟು ದೇವರ ಬಳಿ ಕ್ಷಮೆ ಕೇಳಿ ಉಪವಾಸ ಪ್ರಾರ್ಥನೆ ಮಾಡಿದರೆ ದೇವರು ಅದನ್ನು ಕೇಳಿ ಮನಮರುಗಿ ನಮ್ಮ ಉಪವಾಸ ಪ್ರಾರ್ಥನೆಯನ್ನು ಮೆಚ್ಚಿ ಬೇಕಾದ ಆಶೀರ್ವಾದವನ್ನು ಬಿಡುಗಡೆ ಮಾಡುವನು. ನಮ್ಮ ಜೀವಿತದಲ್ಲಿ ಬರಿದಬೇಕಾದ ಕೆಲವು ಕಾರ್ಯಗಳು ಇರಬಹುದು. ನೋಡಲಾರದ, ಕೇಳಲಾರದ, ಮಾತನಾಡಬಾರದ ಕೆಲವು ಸಂಗತಿಗಳು ಇರಬಹುದು. ನಡೆಯಬಾರದಂತಹ ಕೆಲವು ಮಾರ್ಗಗಳು ಇರಬಹುದು. ಇವುಗಳಿಗೆಲ್ಲಾ ಪಶ್ಚಾತ್ತಾಪದ ಪ್ರಾರ್ಥನೆ ಅಗತ್ಯವಿದೆ. **"ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹಮಾಡಿರಿ. ದುಷ್ಟನು ತನ್ನ ದುರ್ಮಾಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾಕೃಪೆಯಿಂದ ಕ್ಷಮಿಸುವನು"** (ಯೆಶಾ. 55:6–7). **"ನೋಡಿರಿ, ಕೇಡಿನ ಬಂಧನಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿಹೋದವರನ್ನು ಬಿಡುಗಡೆಮಾಡುವದು, ನೊಗಗಳನ್ನೆಲ್ಲಾ ಮುರಿಯುವದು"**(ಯೆಶಾ. 58:6). ನೋಗ ಎಂದರೆ ಅನೇಕ ಅರ್ಥಗಳುಂಟು. ಹೊರೆ, ಭಾರ, ಬಂಧನ, ದಾಸತ್ವ, ಹೀಗೆ ಅನೇಕ ಅರ್ಥಗಳು ಇವೆ. ಇವತ್ತು ಉಪವಾಸ ಪ್ರಾರ್ಥನೆ ಮಾಡುವ ಅನೇಕ ಜನರು ಕೆಲವು ಅಕ್ರಮ ಸಂಬಂಧಗಳಲ್ಲಿ ಸಿಲುಕಿದರೆ, ಇನ್ನು ಕೆಲವರು ದುಷ್ಚಟಗಳಲ್ಲಿ ಸಿಲುಕಿ ಕೊಂಡಿದ್ದರೆ, ಇನ್ನು ಕೆಲವರು ಲೋಕದ ವ್ಯವಹಾರಗಳಲ್ಲಿ ಸಿಲುಕಿಕೊಂಡಿದ್ದಾರೆ. ಅನೇಕರು ಈ ವಿಧವಾದ ಬಂಧನಗಳಿಂದ ಸಿಲುಕಿರುವುದರಿಂದ ದೇವರು ಉಪವಾಸ ಪ್ರಾರ್ಥನೆಗೆ ಉತ್ತರ ಕೊಡಲು ಸಾಧ್ಯವಿಲ್ಲ. ಒಂದು ದೇಶಕ್ಕೆ ನಾನು ಹೋದಾಗ ಒಬ್ಬ ಸಹೋದರನು ನನ್ನನ್ನು ಸಂಧಿಸಿದನು. ಆತನು ತನ್ನ ದು:ಖವನ್ನೆಲ್ಲಾ ನನ್ನ ಬಳಿ ತೋಡಿಕೊಂಡನು. ಆತನಿಗೆ ಪರಿಹಾರ ಬೇಕಿತ್ತು. ಬಿಡುಗಡೆಗಾಗಿ ಅನೇಕ ಕಡೆ ಓಡಾಡಿದನು. 21 ದಿವಸ, 14 ದಿವಸ, 7 ದಿವಸ ಹೀಗೆ ಅನೇಕ ಸಲ ಉಪವಾಸಮಾಡಿ ಪ್ರಾರ್ಥಿಸಿದನು. ಆದರೆ ಕೆಲವು ಸಂಗತಿಗಳಲ್ಲಿ ಆಶೀರ್ವಾದ ಹೊಂದಲು ಸಾಧ್ಯವಿಲ್ಲ. ಆತನು ಉಪವಾಸ ಪ್ರಾರ್ಥನೆ ಮಾಡುತ್ತಿದ್ದ, ಸತ್ಯವೇದ ಓದುತ್ತಿದ್ದ, ಸಭೆಗೆ ಕ್ರಮವಾಗಿ ಹೋಗುತ್ತಿದ್ದನು ಇವೆಲ್ಲಾ ಇದ್ದರೂ ಆತನ ಜೀವಿತದಲ್ಲಿ ಸಮಾಧಾನ ಇರಲಿಲ್ಲ. ಸಾಲದಲ್ಲಿ ಮುಳುಗಿ ಹೋಗಿದ್ದನು, ಕೆಲಸದಲ್ಲಿ ಮೇಲೆ ಬರಲು ಸಾಧ್ಯವಾಗಲಿಲ್ಲ, ಕುಡಿತನಕ್ಕೆ ದಾಸನಾಗಿದ್ದನು. ಊರಿನಲ್ಲಿ ಹೆಂಡತಿಯಿದ್ದರೂ ಪರ ಊರಿನಲ್ಲಿ ಅಕ್ರಮ ಸಂಬಂಧ ಹೊಂದಿದನು. ನಾನು ಸೂಕ್ಷ್ಮವಾಗಿ ವಿಚಾರಿಸಿ ಆತನ ಬಗ್ಗೆ ತಿಳುಕೊಂಡೆನು. ನಾನು ಆತನಿಗೆ ಆಲೋಚನೆ ಕೊಟ್ಟೆ ಕುಡಿಕತನ ಬಿಡಬೇಕು, ಅಕ್ರಮ ಸಂಬಂಧಬಿಟ್ಟು ಬಿಟ್ಟು ಇವೆಲ್ಲಾ ತಪ್ಪಾದ ಕಾರ್ಯಗಳಿಗೆ ಬದಲಾಗಿ ಯೇಸುಕ್ರಿಸ್ತನ ಬಳಿ ಕ್ಷಮಾಪಣೆ ಕೇಳಬೇಕು. ಆಗ ನಿನ್ನ ಪ್ರಾರ್ಥನೆಗೆ ಯೇಸುಕ್ರಿಸ್ತನು ಉತ್ತರ ಕೊಡುತ್ತಾನೆ ಎಂದು ಸಲಹೆ ಕೊಟ್ಟೆನು. ಆಗ ಆತನು ಕಣ್ಣೀರಿನಿಂದ ಯಾವುದೇ ಸಂಗತಿಯನ್ನು ಮಾಡಲು ಸಿದ್ಧವಾಗಿದ್ದೇನೆ ಆದರೆ ಈ ಎರಡು ಸಂಗತಿಗಳಿಂದ ಹೊರಗೆ ಬರಲು ಸಾಧ್ಯವಿಲ್ಲ ಎಂದು ಕಣ್ಣೀರಿಟ್ಟನು. ನಾನು ಆತನಿಗೆ ಹೇಳಿದೆನು. ಯೋಹಾ. 8:34 ಹೇಳುತ್ತದೆ, ಪಾಪಮಾಡುವವನು ಪಾಪಕ್ಕೆ ದಾಸನು ನೀನು ಈವತ್ತು ಕುಡಿಕತನ ಮತ್ತು ವ್ಯಭಿಚಾರಕ್ಕೆ ಸಿಕ್ಕಿ ಅದಕ್ಕೆ ದಾಸನಾಗಿದ್ದಿ, ಇದ್ದರಿಂದ ಬಿಡುಗಡೆಯಾಗುವುದಕ್ಕೆ ಆಸೆಪಡಬೇಕು, ಯೇಸುಕ್ರಿಸ್ತನ ಸಹಾಯವನ್ನು ಕೇಳಬೇಕು. ಕೀರ್ತ. 121:1–2 ಹೇಳುತ್ತದೆ, **ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ; ನನ್ನ ಸಹಾಯ ಎಲ್ಲಿಂದ ಬರುವದು? ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ. "ಆದರೂ ನಾಶಕ್ಕೆ ಒಳಗಾದವನು ಕೈಚಾಚುವದಿಲ್ಲವೋ? ಆಪತ್ತಿಗೆ ಒಳಪಟ್ಟವನು ಕೂಗಿಕೊಳ್ಳುವದಿಲ್ಲವೋ?"** (ಯೋಬ. 30:24). ಆತನಿಗೆ ನಾನು

ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು ಯೆಶಾ. 35:10.

ನೀನು ಇಂದು ಈ ಪಾಪದ ಆಳುವಿಕೆಗೆ ಒಳಗಾಗಿದ್ದಿ ಇದರಿಂದ ಬಿಡುಗಡೆ ಹೊಂದಲು ಕ್ರಿಸ್ತನನ್ನು ದೃಷ್ಟಿಸು ಎಂದು ಸಲಹೆ ನೀಡಿದೆನು. ಈ ಪಾಪಗಳೊಂದಿಗೆ ನೀನು ಎಷ್ಟೇ ಉಪವಾಸ ಪ್ರಾರ್ಥನೆ ಮಾಡಿದರೂ ಕರ್ತನು ಉತ್ತರಿಸಲಾರನು. ಯೋಹಾ. 8:36 **ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾದ ಹಾಗೂ ಶಾಶ್ವತವಾದ ಬಿಡುಗಡೆ. ಎಲ್ಲಿ ದೇವರಾತ್ಮನು ಇದ್ದನೋ ಅಲ್ಲಿ ಬಿಡುಗಡೆ ಉಂಟು.** (2 ಕೊರಿ. 3:17). ಆ ಸಹೋದರನು ತನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟನು. ತನಗೆ ಬಿಡುಗಡೆ ಬೇಕಾಗಿದೆ. ನನಗಾಗಿ ಪ್ರಾರ್ಥಿಸಿ ಎಂದು ಕೇಳಿಕೊಂಡನು. ತನ್ನ ಮೇಲಿರುವ ನೋಗದ ಬಂಧನಗಳಿಂದ ಬಿಚ್ಚಲು ಸಿದ್ಧವಾಗಿರುವ ಸಹೋದರನಿಗಾಗಿ ಪ್ರಾರ್ಥಿಸಿದೆನು. ಆದಾದ ಕೆಲವು ದಿವಸಗಳ ನಂತರ ನಾನು ಭಾರತಕ್ಕೆ ಬಂದ ಮೇಲೆ ಒಂದು ದಿನ ಈ ಸಹೋದರನ ಫೋನ್ ಕರೆ ಬಂದಿತ್ತು. ಆತನು ತಾನು ಕುಡಿಕತನದಿಂದಲೂ, ಅಕ್ರಮ ಸಂಬಂಧದಿಂದಲೂ ಪೂರ್ಣ ಬಿಡುಗಡೆ ಹೊಂದಿದೆ ಎಂಬುದಾಗಿ ನನಗೆ ತಿಳಿಸಿದನು. ಮಾತ್ರವಲ್ಲದೆ ತನ್ನ ಸಾಲವನ್ನು ತೀರಿಸಲು ಕರ್ತನು ನನಗೆ ಸಹಾಯ ಮಾಡಿದನು ಎಂದು ತಿಳಿಸಿದರು. ಈಗ ಇರುವ ಕೆಲಸವನ್ನು ಬಿಟ್ಟು ಚಿಕ್ಕದ್ದಾಂತಹ ವ್ಯಾಪಾರ ಮಾಡಲು ನಿರ್ಧರಿಸುವುದಕ್ಕಾಗಿ, ಆರ್ಥಿಕ ಸಹಾಯ ಮಾಡಲು ಕೇರಳ ಬಿಟ್ಟು ಸಹೋದರ ಮುಂದೆ ಬರುವುದಾಗಿಯೂ ತಿಳಿಸಿದನು ಮತ್ತು ತನ್ನ ಕೌಟುಂಬಿಕ ಜೀವನದಲ್ಲಿ ಶಾಂತಿ ಸಮಾಧಾನ ಬಂದಿದೆ. ವೇಗದಲ್ಲಿ ತನ್ನ ಹೆಂಡತಿಯನ್ನು ಗಲ್ಫ್‌ಗೆ ಕರಿಸುವುದಾಗಿ ತಿಳಿಸಿದನು. ಮಾತ್ರವಲ್ಲದೆ ತಾನು ಅನೇಕರಿಗೆ ಸಾಕ್ಷಿ ಹೇಳಿ ಕರ್ತನ ಕಡೆಗೆ ನಡೆಯುತ್ತಿರುವುದಾಗಿ ತಿಳಿಸಿದನು. ನನ್ನ ಪ್ರಿಯ ಸಹೋದರ, ಸಹೋದರಿಯರೇ, ಅನೇಕರು ನೋಗದ ಬಂಧನಗಳು ಇರುವ ನಿಮಿತ್ತ ಉಪವಾಸ ಪ್ರಾರ್ಥನೆ ಮಾಡಿದರೂ ಅವರಿಗೆ ಆಶೀರ್ವಾದ ಸಿಗುತ್ತಾ ಇಲ್ಲ. ಆದಕಾರಣ ಮೊದಲು ನಮ್ಮನ್ನು ಆಳುವಂತಹ ತಪ್ಪಾದ ಕಾರ್ಯಗಳಿಂದ ಬಿಡುಗಡೆಹೊಂದಿ ಉಪವಾಸ ಪ್ರಾರ್ಥನೆ ಮಾಡಿದರೆ ಖಂಡಿತವಾಗಿ ಕರ್ತನ ಆಶೀರ್ವಾದಕ್ಕೆ ಪಾತ್ರರಾಗುತ್ತೇವೆ.

3) ಯೆಶಾ. 58:6 ಜಜ್ಜಿಹೋದವರನ್ನು ಬಿಡುಗಡೆ ಮಾಡುವುದು. ಜಜ್ಜಿಹೋದವರು ಅಂದರೆ ಕೆಳಕ್ಕೆ ನೂಕಲ್ಪಟ್ಟವರು, ಜನರಿಂದ ಅಸಡ್ಡೆ ಮಾಡಲ್ಪಟ್ಟವರು, ತಿರಸ್ಕರಿಸಲ್ಪಟ್ಟವರು, ದೂರ ಮಾಡಲ್ಪಟ್ಟವರು. ವೇದನೆ ನೋವುಗಳಲ್ಲಿ ಆಕ್ರಮಿಸಲ್ಪಟ್ಟವರು, ಬಿಡುಗಡೆಯು ಯಾವುದೇ ನಿರೀಕ್ಷೆಯಿಲ್ಲದೆ ನಿರಾಶೆಗೊಳಗಾದವರು, ಸೋಲಿನ ಮೇಲೆ ಸೋಲನ್ನು ಕಂಡವರು, ದು:ಖದ ಮೇಲೆ ದು:ಖವನ್ನು ಅನುಭವಿಸಿದವರು, ಇಂಥವರು ಅನೇಕರು ಈ ಲೋಕದಲ್ಲಿ ಇದ್ದಾರೆ. ಇಂಥವರನ್ನು ಬಿಡುಗಡೆ ಮಾಡುವುದಕ್ಕಾಗಿ ನಮಗೆ ಉಪವಾಸ ಪ್ರಾರ್ಥನೆಯು ಅವಶ್ಯಕವಾಗಿ ಬೇಕಾಗಿದೆ. ಈ ರೀತಿಯಾಗಿ ಬಿಡುಗಡೆಯ ಸೇವೆಯ ಉಪವಾಸ ಪ್ರಾರ್ಥನೆ ಮಾಡುವುದಾದರೆ ಇದಕ್ಕೆ ಒಂದು ಅರ್ಥವಿದೆ. 1997 ಇಸವಿಯಲ್ಲಿ ಬ್ರಹರೈನ್ ದೇಶದಲ್ಲಿ ಇದ್ದಾಗ ಒಂದು ದಿವಸ ವ್ಯಯಕ್ತಿಕವಾದ ಪ್ರಾರ್ಥನೆ ಮಾಡುತ್ತಿದ್ದೆನು. ಆಗ ಕರ್ತನು ಒಂದು ದರ್ಶನವನ್ನು ತೋರಿಸಿದನು. ಈ ದರ್ಶನ ಏನೆಂದರೆ ನಿನಗಿರುವಂತಹ ಕರೆಯು ಅಪೋಸ್ತಲರ ಕರೆಯಾಗಿದೆ. ಅನೇಕ ಸಭೆಗಳನ್ನು ನಿನ್ನ ಮೂಲಕವಾಗಿ ಸ್ಥಾಪಿಸುವೆನು, ಈ ಲೋಕದಲ್ಲಿ ಜಜ್ಜಲ್ಪಟ್ಟ ಅನೇಕರನ್ನು ಬಿಡಿಸುವೆನು, ಅನೇಕ ವಿಧವಾದ ಅನಾಥಾಶ್ರಮಗಳನ್ನು ನಿನ್ನ ಮೂಲಕ ಸ್ಥಾಪಿಸುವೆನು. ಅನೇಕ ಅನಾಥರಿಗೆ ನಿನ್ನನ್ನು ತಂದೆಯನ್ನಾಗಿ ಮಾಡುವೆನು ಮತ್ತು ನಮ್ಮ ಊರಿನಲ್ಲಿ ಅನೇಕ ಸ್ಥಳಗಳನ್ನು ತೋರಿಸಿ ನಿನ್ನ ಸೇವೆಗೆ ಕೊಡುತ್ತೇನೆ ಎಂದು ವಾಗ್ದಾನ ಮಾಡಿದನು. ಆತನು ವಾಗ್ದಾನ ಮಾಡಿದಂತೆ ಅನೇಕ ಸಭೆಗಳನ್ನು ಸ್ಥಾಪಿಸಿ, ಅನೇಕ ವಿಧವಾದ ಅನಾಥಾಶ್ರಮಗಳನ್ನು ಸ್ಥಾಪಿಸಿದೆನು. ರಸ್ತೆ ಬದಿಯಲ್ಲಿ ತಿರುಗಾಡುತ್ತಿರುವಂತಹ ಅನೇಕ ಮಾನಸಿಕ ಅಸ್ವಸ್ಥರಿಗೆ ಪುನರ್‌ವಸತಿ ಕಲ್ಪಿಸಲು ಅಮರ ವಿಶ್ವಾಸದಮನೆ ಪುರುಷರಿಗಾಗಿ ಮಾನಸಿಕ ಅಸ್ವಸ್ಥರ ಪುನರ್‌ವಸತಿ ಕೇಂದ್ರವನ್ನು ಸ್ಥಾಪಿಸಲು ಕರ್ತನು ಸಹಾಯಮಾಡಿದನು.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ಬಾಯಾರಿ ನಾಲಿಗೆ ಒಣಗಿ ನೀರನ್ನು ಹುಡುಕಿ ಹೊಂದದ ದೀನದರಿದ್ರರಿಗೆ ಯೆಹೋವನೆಂಬ ನಾನು ಪ್ರಸನ್ನನಾಗುವೆನು ಯೆಶಾ. 41:17.

# ಸ್ಥಳೀಯ ಮತ್ತು ವಿದೇಶ ಸುದ್ದಿ

* ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಿಂದ ತಮಿಳುನಾಡಿಗೆ 2.44 ಟಿಎಂಸಿ (ತೌಸಂಡ್ ಮಿಲಿಯನ್ ಕ್ಯೂಬಿಕ್ ಫೀಟ್) ಕಾವೇರಿ ನೀರನ್ನು ಕೂಡಲೇ ಬಿಡುಗಡೆ ಮಾಡುವಂತೆ ಸುಪ್ರೀಂಕೋರ್ಟ್ ಆದೇಶಿಸುವ ಮೂಲಕ ರಾಜ್ಯದ ಮೇಲೆ ಗದಾ ಪ್ರಹಾರ ಮಾಡಿದೆ. ಇದೇ ಸಂದರ್ಭದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುವ ತಮಿಳುನಾಡು ಸರಕಾರದ ವರ್ತನೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

* ಬರದಿಂದ ಆಹಾರ ಉತ್ಪಾದನೆಯಲ್ಲಿ ಕುಂಠಿತ :– ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಆಹಾರೋತ್ಪಾದನೆಯಲ್ಲಿ ಕುಸಿತ ಆಗಲಿದ್ದು, ಈ ವರ್ಷ 125 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆ ಆಗುವ ಸಾಧ್ಯತೆಗಳಿವೆ ಎಂದು ಅಂದಾಜು ಮಾಡಲಾಗಿದೆ.

* ಭೂಮಿಗೆ ಅಪ್ಪಳಿಸಲಿದೆ ದೈತ್ಯ ಸೌರ ಮಾರುತ! ಸದ್ಯೋಭವಿಷ್ಯದಲ್ಲಿ ಭೂಮಿಗೆ ಪ್ರಬಲ ಸೌರಮಾರುತ ವೊಂದು ಅಪ್ಪಳಿಸುವ ನಿರೀಕ್ಷೆಯಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಪ್ರಬಲ ಸೌರ ಮಾರುತವು ಭೂಮಿಯ ಸಂಪರ್ಕ ಉಪಗ್ರಹಗಳಿಗೂ ಅಪ್ಪಳಿಸುವ ಸಾಧ್ಯತೆಯಿದೆ. ವಿದ್ಯುತ್ ಕಡಿತಕ್ಕೂ ಕಾರಣವಾಗಲಿರುವ ದೈತ್ಯ ಸೌರ ಮಾರುತವು ಸಮುದ್ರಯಾನ ಹಾಗೂ ವಾಯುಯಾನಕ್ಕೂ ಅಡಚಣೆಉಂಟು ಮಾಡಲಿದೆ" ಎಂದು ತಜ್ಞರು ವಿವರಿಸಿದ್ದಾರೆ.

* ಹಾಲು : 4 ರೂ ಏರಿಕೆ :– ಅಕ್ಕಿ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ಈಗಾಗಲೇ ತತ್ತರಿಸಿ ಹೋಗಿರುವ ರಾಜ್ಯದ ಜನತೆಗೆ ಇದೀಗ ಕೆಎಂಎಫ್ ಮತ್ತೊಂದು ಶಾಕ್ ನೀಡಿದ್ದು, 'ನಂದಿನಿ' ಹಾಲಿನ ಬೆಲೆಯನ್ನು ಲೀಟರ್‌ಗೆ 4 ರೂ. ಹೆಚ್ಚಳಮಾಡಿ ಆದೇಶ ಹೊರಡಿಸಿದೆ.

* ಈಶಾನ್ಯ ಅಮೆರಿಕದ ಹಲವೆಡೆ ಪ್ರಸಕ್ತ ಚಳಿಗಾಲದ ಋತುವಿನಲ್ಲಿ ಇದೇ ಮೊದಲ ಬಾರಿಗೆ ಭಾರೀ ಹಿಮ ಮಾರುತ ಬೀಸುವ ಭೀತಿ ತಲೆದೋರಿದ್ದು ನ್ಯೂಯಾರ್ಕ್‌ನಗರ ಹಾಗೂ ಬೋಸ್ಟನ್‌ನಲ್ಲಿ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

* ಸೊಲೊಮನ್ ದ್ವೀಪದಲ್ಲಿ ಪಶ್ಚಾತ್ ಕಂಪನ ಹೊನಿಯಾರ ಸಂಭವಿಸಿದ ಭಾರೀ ಭೂಕಂಪದ ಬಳಿಕ ಸತತ 2ನೇ ದಿನವಾದ ಸೊಲೊಮನ್ ದ್ವೀಪ ಸಮೂಹದಲ್ಲಿ ಭೂಕಂಪ ಸಂಭವಿಸಿದೆ. ಈ ಪಶ್ಚಾತ್ ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.1ರಷ್ಟಿತ್ತು ಎಂದು ಅಮೆರಿಕದ ಭೂಗರ್ಭ ಶಾಸ್ತ್ರ ಸಂಸ್ಥೆಗಳು ತಿಳಿಸಿವೆ.

* ಸುಮಾರು 150 ಅಡಿ (45 ಮೀಟರ್) ವ್ಯಾಸವಿರುವ ಕ್ಷುದ್ರಗ್ರಹವೊಂದು ಮುಂದಿನ ವಾರ ಭೂಮಿಯ ಸನಿಹ ಬರಲಿದೆ. ಇದು ಭೂಮಿಗೆ ಪ್ರದಕ್ಷಿಣೆ ಬರುತ್ತಿರುವ ಸಂಪರ್ಕ ಮತ್ತು ಹವಾಮಾನ ಉಪಗ್ರಹಗಳಿಗಿಂತಲೂ ಹೆಚ್ಚು ನಿಕಟವಾಗಲಿದೆ. ಈ ಗಾತ್ರದ ಕ್ಷುದ್ರಗ್ರಹವೊಂದು ಭೂಮಿಗೆ ಅತಿ ಸಮೀಪ ಬರುತ್ತಿರುವುದು ಇದೇ ಮೊದಲು.

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದ್ವೆವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ನಾನು ಅನುಗ್ರಹಿಸುವ ಮೇಲುಗಳನ್ನು ನನ್ನ ಜನರು ಸಮೃದ್ಧಿಯಾಗಿ ಅನುಭವಿಸುವರು
ಯೆರೆ. 31:14.

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

**ತಿಳುವಳಿಕೆಯ ಸ್ವರ**

# ಹಳೇ ಮತ್ತು ಹೊಸ ಒಡಂಬಡಿಕೆಗಳ ತಾರತಮ್ಯ ನಾನೂರು ವರ್ಷಗಳ ಮೌನಕಾಲ (ಕ್ರಿಸ್ತನು)

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಹೊಸ ಒಡಂಬಡಿಕೆ

1. **ನೇರವೇರುವಿಕೆ :–** ಯಾವನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿ ಬರೆದರೋ, ಆತನು ನಮಗೆ ಸಿಕ್ಕಿದನು. ಆತನು ಯಾರೆಂದರೆ ಯೋಸೇಫನ ಮಗನಾದ ನಜರೇತಿನ ಯೇಸು (ಯೋಹಾ. 1:45).
2. **ವಿಮೋಚಕ:** ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಪಾಪದೊಳಗಿಂದ ನಮ್ಮನ್ನು ಬಿಡಿಸಿದನು (ಗಲಾ. 3:14).
3. **ನಮ್ಮ ತಂದೆ :–** ಪರಲೋಕದಲ್ಲಿರುವ ನಮ್ಮ ತಂದೆ (ಮತ್ತಾ. 6:10).
4. **ಅಂತ್ಯದ ದಿವಸ:–** ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯ, ಚಂದ್ರ, ನಕ್ಷತ್ರಗಳು ಉರಿದು ಲಯವಾಗಿ ಹೋಗುವವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು (2 ಪೇತ್ರ. 3:10).
5. **ಪ್ರಕಾಶಿಸುವ ಬೆಳಕು:–** ನಾನೇ ಲೋಕಕ್ಕೆ ಬೆಳಕು (ಯೋಹಾ. 8:12).
6. **ಸೈತಾನನಿಗೆ ಸೋಲು:–** ಅವರನ್ನು ಮರಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು (ಪ್ರಕ. 20:10).
7. **ಪಾಪಕ್ಕೆ ಪರಿಹಾರ:– ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವನವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು** (ಯೋಹಾ. 3:16).
8. **ಜೀವ ನಿತ್ಯವಾದದ್ದು:–** ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯ ಜೀವನವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ (ಯೋಹಾ. 5:24).
9. **ಯೇಸುವೇ ಯಜ್ಞದ ಕುರಿ:–** ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು (ಯೋಹಾ. 1:29).
10. **ಬಿಡುಗಡೆ:–** ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಂದ ಕಾರಣವಾದ ನಿಯಮದಿಂದ ಕ್ರಿಸ್ತಯೇಸುವಿನ ಮೂಲಕ ಬಿಡಿಸಿತು (ರೋಮ. 8:2).
11. **ಸುವಾರ್ತೆ:–** ಆ ಸುವಾರ್ತೆಯು ದೇವರ ಬಲ ಸ್ವರೂಪವಾಗಿದ್ದು ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವಂಥದಾಗಿದೆ (ರೋಮ. 1:16).
12. **ಸೊತ್ತು:–** ಬೇಡಿಗಳನ್ನು ಹಾಕಿಸಿಕೊಂಡವರ ಕಷ್ಟವನ್ನು ನೋಡಿ ಅವರ ಸಂಗಡ ನೀವು ದು:ಖಪಟ್ಟದ್ದಲ್ಲದೆ ನಮಗೆ ಉತ್ತಮವಾಗಿಯೂ ಸ್ಥಿರವಾಗಿಯೂ ಇರುವ ಆಸ್ತಿಯುಂಟೆಂದು ಚೆನ್ನಾಗಿ ಅರಿತುಕೊಂಡು ನಿಮ್ಮ ಸೊತ್ತನ್ನು ಸುಲುಕೊಳ್ಳುವವರಿಗೆ ಸಂತೋಷದಿಂದ ಬಿಟ್ಟಿರಿ (ಇಬ್ರಿ. 10:34).
13. **ಆತ್ಮೀಕ ಅನುಭವ:–** ಆತನು (ಯೇಸು) ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ (ಲೂಕ. 24:32).
14. **ದೇವರಾತ್ಮ:–** ನಾವೋ ದೇವರಾತ್ಮನ ಮೂಲಕ ನಂಬಿಕೆಯಿಂದ ನೀತಿವಂತರಾಗುತ್ತೇವೆಂಬುವ ನಿರೀಕ್ಷೆ ಸಫಲವಾಗುವದೆಂದು ಎದುರು ನೋಡುತ್ತೇವೆ (ಗಲಾ. 5:5).
15. **ಪೂರೈಕೆ:–** ದೇವರು ತಾನು ನೇಮಿಸಿದ ಕ್ರಿಸ್ತನು ಬಾಧೆಯನ್ನನುಭವಿಸಿ ಸಾಯಬೇಕೆಂಬುದಾಗಿ ಎಲ್ಲಾ ಪ್ರವಾದಿಗಳ ಬಾಯಿಂದ ಮುಂಚಿತವಾಗಿ ಹೇಳಿಸಿದ ಮಾತನ್ನು ಹೀಗೆ ನೇರವೇರಿಸಿದನು. ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ (ಅಪೋ. 3:18–19).
16. **ನಮ್ಮ ರಕ್ಷಕನು:–** ಈ ಹೊತ್ತು ನಿಮಗೋಸ್ಕರ

ಕಷ್ಟದಲ್ಲಿದ್ದ ಈ ಮನುಷ್ಯನು ಮೊರೆಯಿಡಲು ಯೆಹೋವನು ಕೇಳಿ ಎಲ್ಲಾ ಬಾಧೆಗಳಿಂದ ಬಿಡಿಸಿದನು
ಕೀರ್ತ. 34:6.

ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ (ಲೂಕ. 2:11).

17. **ಪರದೈಸಕ್ಕೆ ಪ್ರವೇಶ:–** ಅವರಿಗೆ ಜೀವ ವೃಕ್ಷದ ಹಕ್ಕು ಇರುವದು; ಅವರ ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು (ಪ್ರಕ. 22:14).

**ಹಳೆ ಒಡಂಬಡಿಕೆಯ ಆಜ್ಞೆಗಳು:**

11. ದೇವರು ಮುಂದಣ ಆಜ್ಞೆಗಳನ್ನೆಲ್ಲಾ ಕೊಟ್ಟನು (ವಿಮೋ. 20:1–17).
12. ಪ್ರತಿ ರೂಪವೂ, ಛಾಯೆಯೂ :– ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿ ರೂಪವೂ, ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು ನಡಿಸುವವರು (ಇಬ್ರಿ. 8:5).
13. ಬಾಹ್ಯಾಚಾರಗಳು :– ಅನ್ನ ಪಾನಾದಿಗಳು ವಿವಿಧ ಸ್ನಾನಗಳು ಸಹಿತವಾಗಿ ದೇಹಕ್ಕೆ ಮಾತ್ರ ಸಂಬಂಧಪಟ್ಟ ನಿಯಮಗಳಾಗಿದ್ದು ತಿದ್ದುಪಾಟಿನ ಕಾಲದವರೆಗೆ ಮಾತ್ರ ನೇಮಕವಾದವು (ಇಬ್ರಿ. 9:10).
14. ಹೊರಗಣ ಅರ್ಥ :– ಶಾಸ್ತ್ರದ ಹೊರಗಣ ಅರ್ಥಕ್ಕೆ ಅನುಕೂಲವಾದ ಹಳೇ ರೀತಿಯಲ್ಲಿ ನಾವು ದೇವರನ್ನು ಸೇವಿಸುವವರಲ್ಲ (ರೋಮ. 7:6).
15. ಪ್ರವಾದನೆ :– ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು. ಅದರ ಬೇರಿನಿಂದ ಹೊರಟ ತಳಿರು ಫಲಿಸುವದು; ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನೆ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳುವಳಿಕೆಯನ್ನು, ಯೆಹೋವನ ಭಯವನ್ನು ಉಂಟುಮಾಡುವ ಆತ್ಮ, ಅದು ಯೆಹೋವನ ಆತ್ಮವೇ ನೆಲೆಗೊಂಡಿರುವದು (ಯೆಶಾ. 11:1–2).
16. ನಿರೀಕ್ಷೆಯ ಮೆಸ್ಸೀಯನು :– ಇಗೋ, ನನ್ನ ದೂತನನ್ನು ಕಳುಹಿಸುತ್ತೇನೆ (ಮಲಾ. 3:1).
17. ಪರದೈಸದಿಂದ ತಳ್ಳಿದ್ದು :– ಅವನನ್ನು (ಆದಾಮನನ್ನು) ಏದೆನ್ ತೋಟದಿಂದ ಹೊರಡಿಸಿ ಬಿಟ್ಟನು (ಆದಿ. 3:23).

## ಯೇಸುವಿನ ಶ್ರಮೆಯ ವಿವರ

ಯೇಸು ಶಿಲುಬೆಯನ್ನು ಹೊತ್ತುಕೊಂಡು ಹೋಗುವಾಗ ಮೂರು ಸಾರಿ ಬಿದ್ದನು.

ಕುಡಿಯಲು ನೀರಿಲ್ಲದೆ 17 ಗಂಟೆ ಕಳೆದನು.

ಯೇಸುವಿಗೆ ಆದ ಒಟ್ಟು ಗಾಯ – 5480

ಬೆನ್ನಿನಲ್ಲಿ ಆದ ಗಾಯ – 150

ತಲೆಯಲ್ಲಿ ಮುಳ್ಳುಗಳಿಂದಾದ ಗಾಯ – 17

ಯೆರೂಸಲೇಮಿನ ಬೀದಿಗಳಲ್ಲಿ ಯೇಸುವನ್ನು 350 ಸೇವಕರು, 50 ಮಂದಿ ಕುದುರೆ ಸವಾರರು ಎಳದೊಯ್ದರು. ಆತನ ಶರೀರದಿಂದ 6.1/2 ಲೀಟರ್ ರಕ್ತ ಸುರಿಯಿತು. (ಆಧಾರ – ಅನುದಿನದ ಆಹಾರ, ಡಿಸೆಂಬರ್ – 2000).

ಗೊಲ್ಗಾಥದಿಂದ ಯೆರೂಸಲೇಮಿನ ದೇವಾಲಯಕ್ಕೆ 12 ಕಿ.ಮೀ ದೂರ.

ದೇವಾಲಯದ ತೆರೆ 18 3/4 ಅಡಿ ಎತ್ತರ, 60 ಅಡಿ ಅಗಲ – ನೀಲಿ, ಬಿಳುಪು, ಕಡುಗೆಂಪು, ದೂಮ್ರ ಮುಂತಾದ ನಾಲ್ಕು ಬಣ್ಣಗಳಿಂದ ಅದ್ಬುತವಾದ ರೀತಿಯಲ್ಲಿ ಬಾಬಿಲೋನ್ಯರ ನೇಯಿಗೆಯಿಂದ ಮಾಡಿದ ತೆರೆ (ಆಧಾರ ಸುಬೋಧವಾಣಿ ಏಪ್ರಿಲ್ – ಜೂನ್ 2001).

**ಯೇಸು ಸ್ವಾಮಿಯು ತನ್ನ ಶಿಷ್ಯರೊಂದಿಗೆ ಮಾಡಿದ ಕಡೇ ಪಸ್ಕ ಬೋಜನದಿಂದ ಶಿಲುಬೆಯಲ್ಲಿ ಪ್ರಾಣಬಿಟ್ಟವರೆಗಿನ ಘಟನೆಗಳು:**

1) ಪಸ್ಕದ ಸೌರಣೆ:– (ಮತ್ತಾ. 26:17–19, ಮಾರ್ಕ. 14:12–16, ಲೂಕ. 22:7–13).
2) ಪಸ್ಕ ಬೋಜನ:– (ಮತ್ತಾ. 26:20, ಮಾರ್ಕ. 14:1–18, ಲೂಕ. 22:14–18).
3) ಶಿಷ್ಯರೊಳಗೆ ವಾಗ್ವಾದ:– (ಲೂಕ. 22:24–30).
4) ಶಿಷ್ಯರ ಪಾದಗಳನ್ನು ತೊಳೆದದ್ದು:– (ಯೋಹಾ. 13:1–17).
5) ದ್ರೋಹಿಯಾದ ಶಿಷ್ಯನನ್ನು ಬಯಲುಪಡಿಸಿದ್ದು (ಮತ್ತಾ. 26:21–25, ಮಾರ್ಕ. 14:18–21, ಲೂಕ. 22:21–23 ಮತ್ತು ಯೋಹಾ. 13:21–30).
6) ಕಡೇ ಬೋಜನ:– (ಮತ್ತಾ. 26:26–29, ಮಾರ್ಕ. 14:22–25, ಲೂಕ. 22:19–20 ಮತ್ತು 1 ಕೊರಿ. 11:23–25).
7) ಯೇಸುವಿನ ಕಡೇ ಮಾತುಗಳು (ಯೋಹಾ. 14:1–31).
8) ದ್ರಾಕ್ಷೇ ಬಳ್ಳಿಯ ಸಾಮ್ಯ:– (ಯೋಹಾ. 15:1–11).
9) ಪವಿತ್ರಾತ್ಮನ ವಾಗ್ದಾನ:– (ಯೋಹಾ. 16:7–15).

ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ ಯೆರೆ. 31:3.

10) ಮಧ್ಯಸ್ಥಿಕೆಯ ಪ್ರಾರ್ಥನೆ:– (ಯೋಹಾ. 17:1–26).

11) ಗೆತ್ಸೇಮನೆ ತೋಟದಲ್ಲಿ ಪ್ರಾರ್ಥಿಸಿದ್ದು:– (ಮತ್ತಾ. 26:36–46, ಮಾರ್ಕ. 14:32–42, ಲೂಕ. 22:39–46, ಯೋಹಾ. 18:1).

12) ಯೂದನು ಯೇಸುವನ್ನು ಶತ್ರುಗಳಿಗೆ ಹಿಡುಕೊಟ್ಟದ್ದು (ಮತ್ತಾ. 26:47–56, ಮಾರ್ಕ. 14:43–52, ಲೂಕ. 22:47–53 ಮತ್ತು ಯೋಹಾ. 18:3–13).

13) ಮಹಾಯಾಜಕನ ಆಳಿನ ಕಿವಿಯನ್ನು ವಾಸಿಮಾಡಿದ್ದು : (ಲೂಕ. 22:51).

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

# ಯೋನನು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

ಯೋನ. 4:6–11 ಕರ್ತನಲ್ಲಿ ಪ್ರಿಯರೇ, ಯೋನನ ಪ್ರವಾದನಾ ಗ್ರಂಥವನ್ನು ಧ್ಯಾನಿಸುವಾಗ ಯೋನ ಒಬ್ಬ ಇಸ್ರಾಯೇಲ್ಯನೂ ಗಲಿಲಾಯದ ಗತ್ ಹೇಫೆರಿನವನಾದ ಅಮಿತ್ತೈಯ ಮಗನೂ ಆಗಿದ್ದನು (2 ಅರಸು. 14:25). ಗತ್‌ಹೇಫೆರ್ ಗಲಿಲಾಯದ ನಜರೇತಿನಿಂದ ಐದು ಮೈಲು ದೂರದಲ್ಲಿದೆ. ಕ್ರಿ.ಪೂ. 793–758ರವರೆಗೆ ಇಸ್ರಾಯೇಲ್ಯರನ್ನು ಆಳುತ್ತಿದ್ದ ಎರಡನೇ ಯರೊಬ್ಬಾಮನ ಕಾಲದವನಾಗಿದ್ದನು ಯೋನ. ಆತನು ಎಲೀಷನ ನಂತರ ಆಮೋಸ್, ಹೋಶೇಯ ಎಂಬೀ ಪ್ರವಾದಿಗಳಿಗಿಂತ ಸ್ವಲ್ಪ ಮುಂಚೆ ಪ್ರವಾದನಾ ಸೇವೆಯನ್ನು ಮಾಡಿದ್ದನು. ಇದು ಸತ್ಯವೇದದ 32ನೇ ಪುಸ್ತಕವಾಗಿದೆ. ಪ್ರವಾದಿಯಾದ ಯೋನನು ಕ್ರಿ.ಪೂ 760ರಲ್ಲಿ ಇಸ್ರಾಯೇಲಿನಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು.

ಯೋನ ಎಂಬ ಇಬ್ರಿಯ ಹೆಸರಿನ ಅರ್ಥ ಪಾರಿವಾಳ ಎಂದಾಗಿದೆ. ಈ ಪುಸ್ತಕದ ಗ್ರೀಕ್ ಹೆಸರು Loans ಎಂದು ಲಾಟಿನ್‌ನಲ್ಲಿ Jonas ಎಂದು ಆಗಿದೆ. ಯೋನನು ಅಮಿತ್ತೈಯ ಮಗನಾಗಿದ್ದನು. ಯೆಹೋವನಾದ ದೇವರು ಇಬ್ರಿಯರ ದೇವರು ಮಾತ್ರವಲ್ಲ ಸತ್ಯವಾಗಿ ಕರೆಯುವ ಎಲ್ಲರ ದೇವರಾಗಿದ್ದಾನೆ ಎಂದು ಈ ಪುಸ್ತಕ ತಿಳಿಸಿಕೊಡುತ್ತದೆ.

ಈ ಪುಸ್ತಕದ ಮುಖ್ಯ ವಿಷಯವಾಗಿದೆ – ನಿನೆವೆಯವರ ಮೇಲಿರುವ ದೇವರ ಕೃಪೆ.

ಆಶ್ಶೂರದ ರಾಜಧಾನಿಯಾದ ನಿನವೆ ಪುರಾತನ ಕಾಲದಲ್ಲಿ ಪ್ರಸಿದ್ಧವಾದ ನಗರವಾಗಿತ್ತು. ಈ ಒಂದು ಅನ್ಯಜನಾಂಗದ ಜನರನ್ನು ರಕ್ಷಿಸಲು ದೇವರ ನ್ಯಾಯ ತೀರ್ಪನ್ನು ಪ್ರಸಂಗ ಮಾಡಲು ದೇವರು ಯೋನನನ್ನು ಅಲ್ಲಿಗೆ ಕಳುಹಿಸಿದರು. ಅದು ಮೂರು ದಿನದ ಪ್ರಯಣದಷ್ಟು ಅತಿ ವಿಸ್ತಾರವಾದ ಮಹಾಪಟ್ಟಣವಾಗಿತ್ತು. ಆದರೆ ಯೋನನು ದೇವಜನರನ್ನು ದ್ರೋಹಿಸಿ ನಾಶಮಾಡುವವರು ನಾಶವಾಗಲಿ ಎಂದು ಚಿಂತಿಸಿದನು. ಉತ್ತರ ಪೂರ್ವಕ್ಕೆ ಪ್ರಯಣ ಮಾಡಬೇಕಾದ ಪ್ರವಾದಿಯು ಪಶ್ಚಿಮ ಭಾಗಕ್ಕೆ ತಿರುಗಿದನು ಹಾಗೆ ಯೊಪ್ಪಕ್ಕೆ ಬಂದು ಅಲ್ಲಿಂದ ತಾರ್ಷಿಷಿಗೆ ತೆರಳುವ ಹಡಗನ್ನು ಹತ್ತಿದನು. ದೇವರ ಸನ್ನಿಧಿಯಿಂದ ದೂರವಾಗಿ ಮೆಡಿಟರೇನಿಯನ್ ಸಮುದ್ರದ ಪಶ್ಚಿಮ ಭಾಗಕ್ಕೆ ಮುಟ್ಟಲು ಯೋನನು ತೀರ್ಮಾನಿಸಿದನು (ಯೋನ. 1:3). ಎಲ್ಲವೂ ಸರಿಯಾಗಿ ನಡೆಯಿತು ಯೋನನು ಹಡಗಿನ ಒಳಭಾಗಕ್ಕೆ ಇಳಿದು ಮಲಗಿಕೊಂಡನು. ತಕ್ಷಣ ಸಮುದ್ರವು ಅಲ್ಲಕಲ್ಲೋಲವಾಯಿತು. ಬಿರುಗಾಳಿ ಬೀಸಲು ಸಮುದ್ರದಲ್ಲಿ ದೊಡ್ಡ ತುಫಾನು ಎದ್ದು ಹಡಗು ಒಡೆದು ಹೋಗುವ ಹಾಗಾಯಿತು. ಹಡಗಿನ ಯಜಮಾನನು ಯೋನನನ್ನು ಎಬ್ಬಿಸಿ ಪ್ರಾರ್ಥನೆ ಮಾಡಲು ತಿಳಿಸಿದನು. ದೇವರ ಸಾನಿಧ್ಯದಿಂದ ದೂರ ಹೋಗಲು ಪ್ರಯತ್ನಿಸಿದವನಿಗೆ ಪ್ರಾರ್ಥನೆ ಮಾಡಲು ಸಾಧ್ಯವೋ? ಈ ಕೇಡಿಗೆ ಕಾರಣ ಯಾರು ಎಂದು ಚೀಟುಹಾಕಲು ಚೀಟು ಯೋನನಿಗೆ ಬಂತು. ಹಡಗಿನಲ್ಲಿರುವ ಸುರಕ್ಷತೆಗಾಗಿ ತನ್ನನ್ನು ಸಮುದ್ರದಲ್ಲಿ ಹಾಕಲು ಯೋನನು ತಿಳಿಸಿದನು. ಪ್ರವಾದಿಯನ್ನು ಸಮುದ್ರದಲ್ಲಿ ಹಾಕಿದ ನಂತರ ಹಡಗಿನವರು ಪ್ರಯಾಣ ಮುಂದುವರೆಸಿದರು. ದೇವರು ಸಿದ್ಧಮಾಡಿದ ಒಂದು ಮೀನು ಯೋನನನ್ನು ನುಂಗಿಬಿಟ್ಟಿತು. ಇದು ಸಾಧಾರಣ ಮೀನಲ್ಲ ದೊಡ್ಡ ಮೀನಾಗಿತು (ಮತ್ತಾ. 12:40). ಇಂಗ್ಲೀಷನಲ್ಲಿ ವ್ಹೇಲ್ ಎಂದು ಕರೆಯುವ ಮೀನನ್ನು ತಿಮಂಗಿಲವೆಂದು ಕರೆಯುತ್ತಾರೆ.

ಹಡಗಿನ ಯಜಮಾನನು ತಿಳಿಸಿದರೂ ಪ್ರಾರ್ಥಿಸಿದೆ ಇದ್ದ ಪ್ರವಾದಿಯು ಮೀನಿನ ಹೊಟ್ಟೆಯೊಳಗೆ ಇದ್ದುಕೊಂಡು ಪ್ರಾರ್ಥಿಸುತ್ತಿದ್ದಾನೆ. ಪ್ರತಿಕೂಲಗಳಲ್ಲಿ ದೇವರಲ್ಲದೆ ಆಶ್ರಯ

ಯೆಹೋವನು ನನ್ನ ನೀತಿಗೆ ಸರಿಯಾಗಿ ಮೇಲು ಮಾಡಿದನು ನನ್ನ ಕೈಗಳ ಶುದ್ಧತ್ವಕ್ಕೆ ತಕ್ಕಂತೆ ಪ್ರತಿಫಲಕೊಟ್ಟನು 2 ಸಮು. 22:21.

ಯಾರಿದ್ದಾರೆ? ಮೀನು ಯೋನನನ್ನು ಒಣನೆಲದಲ್ಲಿ ಕಾರಿಬಿಟ್ಟಿತು. ಯೋನನು ಸುರಕ್ಷಿತವಾಗಿ ದಡ ಸೇರಿದನು. ದೇವರು ಪ್ರವಾದಿಯೊಂದಿಗೆ ಪುನ: ಮಾತನಾಡಿದನು. ಯೋನನು ಅನುಸರಿಸಿದನು ಆತನು ಹಿಂದೆಂದೂ ಹೋಗದೆ ಇದ್ದ ನಿನವೆಗೆ ಪ್ರಯಾಣಬೆಳೆಸಿ ಟೈಗ್ರೀಸ್ ನದಿ ತೀರಕ್ಕೆ ಬಂದನು.

ಪ್ರಿಯರೇ, ಸಮುದ್ರ, ಒಣನೆಲ, ಮೀನು ಇವೆಲ್ಲವೂ ಸೃಷ್ಟಿ ಕರ್ತನನ್ನು ಅನುಸರಿಸುವಾಗ ತನ್ನ ಹೋಲಿಕೆಯಲ್ಲೂ, ಸ್ವರೂಪದಲ್ಲೂ ಸೃಷ್ಟಿಸಲ್ಪಟ್ಟ ಮನುಷ್ಯನು ರಕ್ಷಕನನ್ನು ಮರೆತು ದೇವರ ಸನ್ನಿಧಿಯಿಂದ ಓಡಿ ಹೋಗುತ್ತಿದ್ದಾನೆ. ಕತ್ತೆ, ಮೊಸಳೆ, ಕಾಗೆ, ಹುಳು, ಕೋಳಿ, ಸಿಂಹ, ನೋಣ, ಮಿಡತೆ, ಹೇನು, ಕಪ್ಪೆ, ಹೀಗೆ ನಾನಾ ರೀತಿಯ ಜೀವಿಗಳು ದೇವರನ್ನು ಅನುಸರಿಸುತ್ತವೆ ಎಂದು ಸತ್ಯವೇದದಲ್ಲಿ ನೋಡಬಹುದು. ಇಲ್ಲಿ ಸಮುದ್ರವು ಅಲ್ಲಕಲ್ಲೋಲವಾಗುತ್ತಿರುವಾಗಲೂ ಯೋನನನ್ನು ನುಂಗಲು ದೇವರಿಂದ ಆಜ್ಞೆ ಅನುಸರಿಸಿ ಮೀನು ಹಡಗನ್ನು ಹಿಂಬಾಲಿಸುತ್ತಿದೆ. ತಿಳುವಳಿಕೆಯಿಲ್ಲದ ಜೀವಿಗಳು ಸರ್ವಶಕ್ತನಾದ ದೇವರನ್ನು ಅನುಸರಿಸುವಾಗ ಬುದ್ಧಿಯುಳ್ಳ ಮನುಷ್ಯನು ಇದನ್ನು ಕಂಡು ಯಥಾಸ್ಥಾನಗೊಳ್ಳಬೇಕು. ನಂತರವಾಗಿ ಯೋನನು ನಿನವೆ ಪಟ್ಟಣಸೇರಿ ನಾಲ್ವತ್ತು ದಿನಗಳಾದ ಮೇಲೆ ನಿನವೆಯು ಕೆಡವಲ್ಪಡುವದು ಎಂದು ಸಾರ ತೊಡಗಿದನು (ಯೋನ. 3:4). ಮೂರು ದಿವಸ ಪಟ್ಟಣದಲ್ಲಿ ಈ ನ್ಯಾಯತೀರ್ಪಿನ ಸಂದೇಶವನ್ನು ಯೋನನು ತಿಳಿಸಿದನು. ಇದರ ಪ್ರಭಾವ ಎಷ್ಟಿತ್ತೆಂದರೆ ಯೋನನಿಗೆ ಮೀನಿನ ಹೊಟ್ಟೆಯೊಳಗೆ 3 ದಿನ ಒಳ್ಳೆ ತರಬೇತಿ ಹಾಗೂ ಪ್ರಿಪೆರ್‌ಗೆ ಟೈಮ್ ಸಿಕ್ಕಿತು. ಈ ಎಫೆಕ್ಟ್‌ನಿಂದ ನಿನವೆಯ ಅರಸನಿಂದ ಹಿಡಿದು ಗುಲಾಮನವರೆಗೆ ಮಾತ್ರವಲ್ಲ ಪ್ರಾಣಿಗಳು ಕೂಡಾ ಉಪವಾಸ ಮಾಡಿ ದೇವರ ಸನ್ನಿಧಿಯಲ್ಲಿ ಪಶ್ಚಾತ್ತಾಪಪಟ್ಟರು. ದೇವರು ಮನಮರುಗಿ ಅವರನ್ನು ಬಿಡಿಸಿ ಪಟ್ಟಣವನ್ನು ರಕ್ಷಿಸಿದನು.

ಯೋನನು ಒಬ್ಬ ಸುವರ್ಣ ಕಾಲದ ಪ್ರವಾದಿ ಇಸ್ರಾಯೇಲಿನ ಏಳು ಆಡಳಿತಗಳಲ್ಲಿ ಒಳ್ಳೆಯ ಆಡಳಿತ. ಯೇಹುವಿನ ಮನೆತನದವರಾಗಿತ್ತು ಆತನು ಮಾತ್ರ ಇಸ್ರಾಯೇಲಿನ ಅಭಿಷಿಕ್ತ ಅರಸನಾಗಿ ಆಳಿದನು. ಯೇಹುವಿನ ಮನೆತನವರದ್ದು, ನಾಲ್ಕನೇ ಆಡಳಿತವಾಗಿತ್ತು (2 ಅರಸು. 9:6–7). ನಾಲ್ಕನೇ ರಾಜನಾದ ಯಾರೋಬ್ಬಾಮನ ಕಾಲದಲ್ಲಿ ಇಸ್ರಾಯೇಲ್ಯರಿಗೆ ರಥರಥಾಶ್ವಬಲವಾಗಿದ್ದ ಪ್ರವಾದಿಯಾದ ಯೋನನು ನಿನವೆಗೆ ಹೋದನು. ತನ್ನ ಗುರು ಪ್ರವಾದಿಯಾದ ಎಲೀಷನ ಮರಣದ ನಂತರ ಅರಸನಾದ ಯೋವಾಷನ ಕಾಲದಲ್ಲಿ ತಾನು ರಾಜಕೀಯ ಪ್ರವಾದಿಯಾಗಿ ಎಣಿಸಲ್ಪಟ್ಟನು.

ಪ್ರವಾದಿಯಾದ ಎಲೀಷನ ನಂತರ ಇಸ್ರಾಯೇಲ್ಯರ ರಥಾರಥಾಶ್ವ ಬಲವಾಗಿರಬೇಕಾಗಿದ್ದ ಗೇಹಜಿಯು ಹಣದ ವ್ಯಾಮೋಹವುಳ್ಳವನಾದ್ದರಿಂದ ದೇವರು ಸೇವೆಯಿಂದ ನೀಗಿಸಿದನು. ಆ ಸ್ಥಾನಕ್ಕೆ ನಂಬಿಗಸ್ತ ವ್ಯಕ್ತಿಯನ್ನು ತಂದನು. ಚಿಕ್ಕ ಪ್ರಾಯದಲ್ಲಿಯೇ ಪ್ರವಾದಿಯಾದ ಎಲೀಷನ ಶಿಷ್ಯನಾಗಿ ಯೋನನು ಎಣಿಸಲ್ಪಟ್ಟಿದ್ದನು.

ಪ್ರವಾದಿಯಾದ ಎಲೀಷನ ನಂತರ ಅಂಧಕಾರದಲ್ಲಿದ್ದ ಇಸ್ರಾಯೇಲ್ಯರಿಗೆ ಬೆಳಕನ್ನು ಕೊಡಲು ದೇವರು ಜೆಬುಲೂನ್ ಕುಲದವನಾದ ಯೋನನನ್ನು ಆರಿಸಿಕೊಂಡನು. ಆದುದರಿಂದ ಯೋನನನ್ನು ಯೆಹೂದ್ಯರ ಜೆಬುಲೂನ್ ಕುಲದ ಬೆಳಕು ಎಂದು ಕರೆಯುತ್ತಾರೆ.

1) ಯೋನನು ನಿನವೆಯವರಿಗೆ ಗುರುತಾದ ಹಾಗೆ ಯೇಸುಕ್ರಿಸ್ತನು ಕೃಪಾಯುಗದಲ್ಲಿ ಲೋಕಕ್ಕೆ ಒಂದು ಗುರುತಾಗಿದ್ದಾನೆ (ಲೂಕ. 11:29–32).

2) ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ ಹಾಗೆಯೇ ಯೇಸುಕ್ರಿಸ್ತನು ಸಮಾಧಿಯಲ್ಲಿ ಮೂರು ಹಗಲು ಮೂರು ರಾತ್ರಿ ಇದ್ದನು (ಮತ್ತಾ. 12:39–41).

3) ಯೋನನು ಮೀನಿನ ಹೊಟ್ಟೆಯೊಳಗಿಂದ ಹೊರಗೆ ಬಂದ ಹಾಗೆ ಯೇಸುಕ್ರಿಸ್ತನು ಸಮಾಧಿಯನ್ನು ಭೇದಿಸಿ ಪುನರುತ್ಥಾನಗೊಂಡನು.

4) ಯೋನನ ಪ್ರಸಂಗದಲ್ಲಿ ನಿನವೆಯುವರು ರಕ್ಷಣೆಹೊಂದಿದರು. ಯೇಸುಕ್ರಿಸ್ತನ ರಕ್ಷಣೆಯ ಸಂದೇಶದಿಂದ ಪಾಪಿಗಳು ನಿತ್ಯ ಜೀವವನ್ನು ಹೊಂದಿದರು.

5) ಯೋನನು ಲೋಕದಿಂದ ಬಂದ ಗುರುತು, ಯೇಸು ಪರಲೋಕದಿಂದ ಬಂದ ಗುರುತು.

6) ಪುನ: ಪಾಪದಲ್ಲಿ ಮುಳುಗಿದ ನಿನವೆಯವರು ಕ್ರಿ.ಪೂ. 612ರಲ್ಲಿ ಪೂರ್ಣವಾಗಿ ನಾಶವಾದ ಹಾಗೆ ಕೃಪಾಯುಗದಲ್ಲಿ ರಕ್ಷಣೆಹೊಂದದೆ ಇರುವವರು ನಿತ್ಯ ನರಕಕ್ಕೆ ತಳ್ಳಲ್ಪಡುತ್ತಾರೆ.

ಕರ್ತನು ತಾನೇ ನಿಮ್ಮೆಲ್ಲರನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ನಿನ್ನ ಜೀವಮಾನವೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು
ಯೆಹೋ. 1:5.

## ಆಪ್ತಸಲಹೆ

* ಹುಬ್ಬುಗಳನ್ನು ಕತ್ತರಿಸುವ್ಯದರಿಂದ ನಮ್ಮ ಸೌಂದರ್ಯ ಹೆಚ್ಚುತ್ತದೋ ಗೊತ್ತಿಲ್ಲ. ಆದರೆ, ಹುಟ್ಟುವಾಗಿನಿಂದ ಇದ್ದ ಹುಬ್ಬುಗಳನ್ನು ನೀವೇಕೆ ಕತ್ತರಿಸುತ್ತೀರಿ. ಅದನ್ನು ಹಾಗೇ ಬಿಟ್ಟು ನೋಡಿ. ನಿಮ್ಮ ಸೌಂದರ್ಯ ಹೆಚ್ಚೇ ಅಲ್ಲದೆ ಕಡಿಮೆ ಆಗದು. ನೀವು ದಿನಾ ಮಲಗುವಾಗ ಹುಬ್ಬುಗಳಿಗೂ ಕಣ್ಣರೆಪ್ಪೆಗಳಿಗೂ ಶುದ್ಧತೆಂಗಿನ ಎಣ್ಣೆಯನ್ನು ಹಚ್ಚಿ ಮಲಗಿ ಕಣ್ಣು ಚೆನ್ನಾಗಿ ಕಾಣುತ್ತದೆ.

* ಹಿಂದಿನ ಕಾಲದಲ್ಲಿ ಸಾದಾ ಪೌಡರ್ ಡಬ್ಬಿಗಳು ಕೂಡಾ ಮನೆಯಲ್ಲಿ ಇರುತ್ತಿರಲಿಲ್ಲ. ಅವರಿಗೆ ಮನೆಗಳಲ್ಲೇ ಮದ್ದುಗಳನ್ನು ತಯಾರಿಸುವುದು ಗೊತ್ತಿತ್ತು. ಇತ್ತೀಚಿನ ದಿನಗಳಲ್ಲಿ ತಲೆಯಿಂದ ಹಿಡಿದು ಕಾಲ ಬೆರಳಿನ ತನಕ ಕೃತಕ ಸಾಧನಗಳ ಉಪಯೋಗ ಕಂಡುಬರುತ್ತಿದೆ. ಮುಖದ ಮೇಲಿನ ಮೊಡವೆಗಳನ್ನು ಕಿಣುಕಬಾರದು. ಯಾವ ಕ್ರಿಮ್ ಆಗಲಿ, ಹಚ್ಚುವಾಗ ಎಚ್ಚರಿಕೆ ವಹಿಸಬೇಕು. ಕೆಲವು ಕ್ರೀಮ್‌ಗಳ ಎಲರ್ಜಿಯೂ ಆಗುವುದಿದೆ. ಬೆಳಿಗ್ಗೆ ಎದ್ದೊಡನೆ ಸ್ವಚ್ಛವಾಗಿ ಮುಖ ತೊಳೆದಾದ ಮೇಲೆ ಮನೆಯಲ್ಲಿ ಮಾಡಿದ ಸ್ವಲ್ಪ ಅರಸಿನ, ನೀರು ಬೆರೆಸಿ ಹಚ್ಚಿದರೆ ಮೊಡವೆಯೇ ಏಳುವುದಿಲ್ಲ.

* ತುಟಿಗಳ ಆರೋಗ್ಯ ಚೆನ್ನಾಗಿ ಕಾಪಾಡಿಕೊಂಡು ಬರುವುದಾದರೆ ಒಳ್ಳೆಯ ಆಹಾರ ಸೇವನೆ ಅತಿ ಉತ್ತಮ. ಹಸಿರು ತರಕಾರಿ, ಹಣ್ಣುಹಂಪಲು, ಹಾಲು, ಮಜ್ಜಿಗೆ ಇದನ್ನೆಲ್ಲಾ ಸೇವಿಸುತ್ತಿದ್ದರೆ ನಿಮ್ಮ ತುಟಿಗಳ ಮತ್ತು ಉಗುರುಗಳು ಕೆಂಪಗಾಗಿ ಆರೋಗ್ಯವಂತರಂತೆ ಕಾಣುತ್ತದೆ. ಲಿಪ್‌ಸ್ಟಿಕ್ ಹಚ್ಚಿಕೊಳ್ಳುವಾಗಲೂ ಅಲರ್ಜಿಯಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ.

– ಸಂಗ್ರಹ

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**9902334941, 08202002781, 09964070654.**

## ಬೇಕಾಗಿದ್ದಾರೆ

**24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥನಾ ವೀರರಾಗಿ ಪ್ರಾರ್ಥನೆ ಮಾಡಲು ಇಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ.**

**9902334941**

ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು ಯೆಹೆ. 36:27.

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಸದಮಲನೆನಿಸಿಕೊಂಡು ಶಾಶ್ವತಲೋಕದಲ್ಲಿ ನಿತ್ಯನಿವಾಸಿಯಾದ ಮಹೋನ್ನತನು ಹೀಗನ್ನುತ್ತಾನೆ, ಉನ್ನತಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನೂ ಜಜ್ಜಿಹೋದವನ ಮನಸ್ಸನ್ನೂ ಉಜ್ಜೀವಿಸುವವನಾಗಿದ್ದೇನೆ"** (ಯೆಶಾ. 57:15). **"ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ"** (ಕೀರ್ತ. 51:17) ಹೌದು ಪ್ರಿಯರೇ, ದೇವರ ವಾಕ್ಯಕ್ಕೆ ಅವಿಧೇಯತೆಯನ್ನು ತೋರಿದ ಒಂದೊಂದು ಸಂಗತಿಯನ್ನು ನೆನಪು ಮಾಡಿ ದೇವರ ಸಂಗಡ ಕ್ಷಮೆ ಕೇಳಿಕೊಳ್ಳೋಣ, ಹೊಸ ತೀರ್ಮಾನ ಮಾಡಿಕೊಳ್ಳೋಣ. ಇನ್ನು ಮುಂದೆ ದೇವರ ವಾಕ್ಯಕ್ಕೆ ವಿಧೇಯನಾಗುತ್ತೇನೆ, ದೇವರಿಗಾಗಿ ಜೀವಿಸುತ್ತೇನೆ. ನಿಮ್ಮ ಈ ತೀರ್ಮಾನದಿಂದ ದೇವರು ನಿಮ್ಮನ್ನು ವಿಶೇಷವಾದ ರೀತಿಯಲ್ಲಿ ಆಶೀರ್ವದಿಸಲ್ಲಿಕ್ಕೆ ಹೋಗುವನು. ಸಮೃದ್ಧಿಯಾದ ಜೀವಿತವನ್ನು ಯೋಹಾ. 10:10 ಪ್ರಕಾರ ಅನುಗ್ರಹಿಸುವನು.

ರೂತಳ ಪುಸ್ತಕವು ನಿಜವಾಗಿಯೂ ಆಶೀರ್ವಾದಿಸಲ್ಪಟ್ಟಂತಹ ಪುಸ್ತಕವಾಗಿದೆ. ದೇವರ ಸೇವೆ ಮಾಡುವ ಸ್ತ್ರೀಯರಿಗೆ ಪ್ರೋತ್ಸಾಹದಾಯಕವಾದ ಪುಸ್ತಕವಾಗಿದೆ. ಸತ್ಯವೇದದಲ್ಲಿ ಸ್ತ್ರೀಯರ ಹೆಸರಿನಲ್ಲಿ ಬರೆಯಲ್ಪಟ್ಟ ಎರಡು ಪುಸ್ತಕಗಳಿವೆ. ಅವುಗಳಲ್ಲಿ ಮೊದಲನೆಯದು ರೂತಳ ಪುಸ್ತಕವಾದರೆ ಎರಡನೆಯದು ಎಸ್ತೇರಳ ಪುಸ್ತಕವಾಗಿದೆ. ರೂತಳು ಮೋವಾಬ್ಯಳಾದರೆ, ಎಸ್ತೇರಳು ಯೆಹೂದ್ಯಳಾಗಿದ್ದಾಳೆ. ಆದರೂ ಅವರಿಬ್ಬರೂ ತಮ್ಮ ತಮ್ಮ ಪ್ರತ್ಯೇಕವಾದ ಜೀವಿತದ ಸ್ಥಿತಿಗಳಲ್ಲಿ ಪ್ರತ್ಯೇಕವಾದ ರೀತಿಯಲ್ಲಿ ಅವರು ದೇವರ ಮೇಲಿರುವ ನಂಬಿಕೆಯನ್ನು, ಭಕ್ತಿಯನ್ನು ಪ್ರಕಟಿಸುವವರಾಗಿದ್ದಾರೆ. ರೂತಳ ಹೆಸರಿನಲ್ಲಿ ಬರೆಯಲ್ಪಟ್ಟ ಈ ಪುಸ್ತಕದಲ್ಲಿ 4 ಅಧ್ಯಾಯಗಳಿದ್ದು 85 ವಚನಗಳನ್ನೊಳಗೊಂಡ ಒಂದು ಚಿಕ್ಕ ಪುಸ್ತಕವಾಗಿದೆ. ಇದು ಚಿಕ್ಕ ಪುಸ್ತಕವಾದರೂ ನಮ್ಮ ಆತ್ಮವನ್ನು ಉಜ್ಜೀವಿಸಮಾಡುವಂತದ್ದಾಗಿದೆ. ರೂತಳ ಪುಸ್ತಕವು ದೇವರ ಕೃಪೆಯನ್ನು ಎತ್ತಿ ತೋರಿಸುತ್ತದೆ, ಎಸ್ತೇರಳ ಪುಸ್ತಕವು ದೇವರ ಮಹಿಮೆಯನ್ನು ಎತ್ತಿ ತೋರಿಸುತ್ತದೆ. ಮೊರ್ದಕೈ ಎಸ್ತೇರಳನ್ನು, ನೊವೊಮಿ ರೂತಳನ್ನು ಸತ್ಯದ ಮಾರ್ಗದಲ್ಲಿ ನಡೆಸಿದಂತೆಯೇ ಪರಿಶುದ್ಧಾತ್ಮನು ಇಂದು ಕ್ರೈಸ್ತ ವಿಶ್ವಾಸಿಗಳನ್ನು ಸತ್ಯದ ಮಾರ್ಗದಲ್ಲಿ ನಡೆಸುವವನಾಗಿದ್ದಾನೆ. ಯೋಹಾ. 16:13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನು ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಎಸ್ತೇರಳ ಪುಸ್ತಕದಲ್ಲಿ ಅರಸನಾದ ಅಹಷ್ವೇರೋಷನು ಎಸ್ತೇರಳನ್ನು ಮರಣದಂಡನೆಯಿಂದ ಬಿಡಿಸಿದಂತೆಯೇ, ಬೋವಜನು ರೂತಳನ್ನು ಮೋದವ್ಯದಿಂದ ಬಿಡಿಸಿದಂತೆಯೇ ದೇವಕುಮಾರನಾದ ಯೇಸುಕ್ರಿಸ್ತನು ನಮ್ಮನ್ನು ಪಾಪದ ದಾಸತ್ವದಿಂದ ಬಿಡಿಸಿ ಕಾಯುವವನು ಆಗಿದ್ದಾನೆ. ಈ ಪುಸ್ತಕದಲ್ಲಿರುವ ಪ್ರತಿಯೊಂದು ಘಟನೆಗಳು ಚಾರಿತ್ರಿಕ ಘಟನೆಗಳಾಗಿವೆ. ಇದರಲ್ಲಿ ಬರೆದಿರುವ ಸಂಗತಿಗಳು ನ್ಯಾಯಸ್ಥಾಪಕರು ಅಳುತ್ತಿದ್ದ ಕಾಲದಲ್ಲಿ ಸಂಭವಿಸಿದ ಘಟನೆಗಳಾಗಿವೆ. ಎಂದು ತಿಳಿಯಬಹುದು. ಮೋಶೆ ಸತ್ತ ಮೇಲೆ ಯೆಹೋಶುವನು ಇಸ್ರಾಯೇಲ್ಯರನ್ನು ಕಾನಾನ್ ದೇಶಕ್ಕೆ ಸೇರಿಸಿದನು. ದೇವರು ಇಸ್ರಾಯೇಲರೊಂದಿಗಿದ್ದು ಯುದ್ಧ ಮಾಡಿದ್ದರಿಂದ ಯೆಹೋಶುವನು ಕಾನಾನಿನ ಏಳು ಜನಾಂಗಗಳನ್ನು ಗೆದ್ದು 31 ಅರಸರನ್ನು ಸೋಲಿಸಿದನು. ಆದರೆ ಇಸ್ರಾಯೇಲರು ದೈವೇಚ್ಛೆಯಂತೆ ಕಾನಾನ್ಯರನ್ನು ಸಂಪೂರ್ಣ ನಾಶಮಾಡದೆ ಹೋದದ್ದರಿಂದ ಅವರು ಇಸ್ರಾಯೇಲರ ಹತ್ತಿರದಲ್ಲಿಯೇ ಉಳಿದು ಅವರಿಗೆ ಚುಚ್ಚುವ ಮುಳ್ಳಾಗಿ ಹೋದರು. ಯೆಹೋಶುವನು ಮರಣಹೊಂದಿದ ಮೇಲೆ ಇಸ್ರಾಯೇಲರು ತಮ್ಮನ್ನು ಬಿಡುಗಡೆ ಮಾಡಿ ಹಾಲೂ ಜೇನು ಹರಿಯುವಂತಹ ಕಾನಾನಿಗೆ ಕರೆದುಕೊಂಡು ಬಂದಂತಹ ದೇವರನ್ನು ಮರೆತು ತಮ್ಮ ಸುತ್ತ ಮುತ್ತಲು ವಾಸವಾಗಿದ್ದ ಅನ್ಯಜರನ್ನು ಅನುಸರಿಸಿ ಅವರ ಅಸಹ್ಯ ದೇವರುಗಳಾದ ವಿವಿಧ ವಿಗ್ರಹಗಳಿಗೆ ಅಡ್ಡಬಿದ್ದು ಆರಾಧಿಸಿ ದೇವರ ದೃಷ್ಟಿಯಲ್ಲಿ ದ್ರೋಹಿಗಳಾದರು. ಆದುದರಿಂದ ದೇವರ ಕೋಪವು ಅವರ ಮೇಲೆ ಉರಿಯತೊಡಗಿತು. ಆದುದರಿಂದ ದೇವರು ಇಸ್ರಾಯೇಲ್ಯರನ್ನು ಸೂರೆ ಮಾಡುವವರ ಕೈಗೆ ಒಪ್ಪಿಸಿದನು. ಇದರಿಂದ ಇಸ್ರಾಯೇಲ್ಯರು ತಮ್ಮ ಸುತ್ತ ಮುತ್ತಲು ಇರುವ ವೈರಿಗಳ ಮುಂದೆ ನಿಲ್ಲಲಾರದೆ ಹೋದರು. ಯೆಹೋವನ ಹಸ್ತವು ಅವರಿಗೆ ವಿರುದ್ಧವಾಗಿಯೇ ಇದ್ದುದರಿಂದ ಅವರಿಗೆ ಬಹು ಸಂಕಟವಾಯಿತು. ಆಗ ಅವರು ಪದೇ ಪದೇ ದೇವರಿಗೆ ಮೊರೆಯಿಟ್ಟರು ಆಗ ದೇವರು ಇಸ್ರಾಯೇಲ್ಯರ ಮೇಲೆ ಕನಿಕರಪಟ್ಟು ಅವರನ್ನು ವಿಮೋಚಿಸಿ ಕಾಪಾಡಲು ನ್ಯಾಯಸ್ಥಾಪಕರನ್ನು ಎಬ್ಬಿಸಿದನು. ಇವರು ಸುಮಾರು 450

ನನ್ನ ವಾಕ್ಯವನ್ನು ಕಾಪಾಡಿದ್ದರಿಂದ ಇಗೋ, ನಿನ್ನೆದುರಿನಲ್ಲಿ ಒಂದು ಬಾಗಿಲನ್ನು ತೆರೆದಿಟ್ಟಿದ್ದೇನೆ (ಪ್ರಕ. 3:8).

ವರ್ಷಗಳ ಕಾಲ ಅಂದರೆ ಪ್ರವಾದಿಯಾದ ಸಾಮುವೇಲನ ಕಾಲದವರೆಗೂ ಅವರನ್ನು ಪರಿಪಾಲಿಸುತ್ತಾ ಬಂದರು. ಆದರೂ ಅವರು ಈ ನ್ಯಾಯಸ್ಥಾಪಕರ ಮಾತನ್ನು ಕೇಳದೆ ತಮ್ಮ ವೊಂಡುತನವನ್ನು ಬಿಡದೆ ಅನ್ಯದೇವರುಗಳನ್ನು ಆರಾಧಿಸುವುದನ್ನು ಬಿಡಲೇ ಇಲ್ಲ. ರಾಜನಿಲ್ಲದ ರಾಜ್ಯವು ಹೇಗೆ ಅರಾಜಕತೆಯಿಂದ ಭ್ರಷ್ಟವಾಗಿರುತ್ತದೋ, ಯಜಮಾನನಿಲ್ಲದ ಕುಟುಂಬವು ಅಕ್ರಮಗಳಿಗೆ ಒಳಗಾಗಿರುತ್ತದೋ ಹಾಗೆಯೇ ಆ ದೇಶವು ದೇವರ ಆಶೀರ್ವಾದವಿಲ್ಲದೆ ಭ್ರಷ್ಟತ್ವದಲ್ಲಿಯೇ ಮುಂದುವರಿಯಿತು. ರೂತಳ ಪುಸ್ತಕವು ಅನೇಕ ಆತ್ಮೀಕ ಸತ್ಯಗಳಿಂದ ಕೂಡಿದ ಪುಸ್ತಕವಾಗಿದೆ. ಇದು ನಮ್ಮ ಆತ್ಮವನ್ನು ಉಜ್ಜೀವಿಸಮಾಡುವುದು ಮಾತ್ರವಲ್ಲದೆ ಅನುದಿನದ ನಂಬಿಕೆಯ ಜೀವಿತಕ್ಕೆ ಮಾರ್ಗದರ್ಶನ ಮಾಡಿ ನಮ್ಮ ಆತ್ಮವನ್ನು ಸಂತೃಪ್ತಿಪಡಿಸುವಂತದ್ದು ಆಗಿದೆ. ಅನೇಕ ರೀತಿಯಲ್ಲಿ ಹಿಂಜರಿದು ಹೋದವರು ಮಾನಸಾಂತರಪಟ್ಟು ಹಿಂದಿರುಗಿ ಬರುವವರಿಗೆ ಸಿಕ್ಕುವಂತಹ ಕ್ಷಮೆ ಹಾಗೂ ದೇವರ ಆಶೀರ್ವಾದ ಮತ್ತು ಪುನರ್‌ಸ್ಥಾಪನೆಯನ್ನು ತಿಳಿಸುವಂತಹ ಪುಸ್ತಕವಾಗಿದೆ. ರೂತಳ ಪುಸ್ತಕ ಯೇಸುಕ್ರಿಸ್ತನ ಬರೋಣಕ್ಕೆ ಸಿದ್ಧಪಡಿಸಿಕೊಳ್ಳುವ ಆತನ ಮದಲಗಿತ್ತಿಯಾದ ಸಭೆಗೆ ಹೋಲಿಕೆಯಾಗಿದ್ದರೆ, ಬೋವಜನು ಕರ್ತನಾದ ಯೇಸುಕ್ರಿಸ್ತನಿಗೆ ಹೋಲಿಕೆಯಾಗಿರುವನು.

ಕೃಪೆಯುಳ್ಳ ಕರ್ತನು ತಾನೇ ನಿಮ್ಮನ್ನು ಆಶೀರ್ವದಿಸಲಿ.

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ಸಾಮಾನ್ಯ ಜ್ಞಾನಕೋಶದ ರಸ ಪ್ರಶ್ನೋತ್ತರಗಳು

1. **'ಕ್ವಿಜ್'** ಪದವನ್ನು ಮೊದಲು ಬಳಸಿದವರು ಯಾರು ?
2. **'ಕ್ಷಿಪಣಿ ಮಾನವ'** ಎ.ಪಿ.ಜೆ. ಅಬ್ದುಲ್ ಕಲಾಂ ಭಾರತದ ಎಷ್ಟನೇ ರಾಷ್ಟ್ರಪತಿ ?
3. ಉಪರಾಷ್ಟ್ರಪತಿ ಕೃಷ್ಣಕಾಂತ್ ಅವರ ನಿಧನ ಯಾವಾಗ ಆಯಿತು?
4. ಭಾರತದ ಪ್ರಥಮ ಮಹಿಳಾ ರಾಷ್ಟಪತಿ ?
5. ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ್ದ ದಿನ ಯಾವುದು?
6. ಭಾರತದ ಕ್ಷಿಪಣಿ ಕಾರ್ಯಕ್ರಮದ ರೂವಾರಿ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್ ಕಲಾಂ ಅವರ ಪೂರ್ಣ ಹೆಸರೇನು?
7. ಶತಮಾನದ ಶ್ರೇಷ್ಠ ವಿಸ್ಡನ್ ಭಾರತೀಯ ಕ್ರಿಕೇಟಿಗ ಪ್ರಶಸ್ತಿಯನ್ನು ಪಡೆದ ಆಟಗಾರ ಯಾರು?
8. ಸಿಡ್ನಿ ಓಲಂಪಿಕ್‌ನಲ್ಲಿ ಪದಕ ಪಡೆದ ಭಾರತದ ಮಹಿಳೆ?
9. ಕರ್ನಾಟಕದ ಪ್ರಥಮ ಮುಖ್ಯಮಂತ್ರಿ ಯಾರು?
10. ಬೆಂಗಳೂರು ನಗರಕ್ಕೆ **'ಉದ್ಯಾನ ನಗರ'** ಎಂದು ಹೆಸರಲ್ಲದೇ ಇನ್ನೊಂದು ಹೆಸರು ಯಾವುದು?
11. ವಿಶ್ವದಲ್ಲಿರುವ ಒಟ್ಟು ಆಡು ಭಾಷೆಗಳು ಎಷ್ಟು ?
12. ಟೊಮೊಟೊ ಹಣ್ಣನ್ನು ಮೊದಲು ಬೆಳೆದ ದೇಶ?
13. **"ಕೆಂಪು ಹೂವಿನ ತೋಟ"** ಎಂದು ಯಾವುದನ್ನು ಕರೆಯುತ್ತಾರೆ?
14. ದಕ್ಷಿಣ ಭಾರತಕ್ಕೆ ಸೇರಿದ ಮೊದಲ ಪ್ರಧಾನಿ?
15. ಭಾರತದಲ್ಲಿ ಒಟ್ಟು ರಾಜ್ಯಗಳ ಸಂಖ್ಯೆ ಎಷ್ಟು?

ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು ಇದು ಸೇನಾಧೀಶ್ವರ ಯೆಹೋವನ ನುಡಿ (ಹಗ್ಗಾ. 2:9).

## ಮಕ್ಕಳ ಸ್ವರ

1. ಮಿದ್ಯಾನದ ಯಾಜಕನಾದ ಮೋಶೆಯ ಮಾವನ ಹೆಸರೇನು?
2. ಅಬ್ರಹಾಮನು ತನ್ನ ಮಗನಿಗೆ ಬದಲಾಗಿ ಟಗರನ್ನು ಹೋಮ ಮಾಡಿದ ಮೇಲೆ ಆ ಸ್ಥಳಕ್ಕೆ ಏನೆಂದು ಹೆಸರಿಟ್ಟನು ?
3. ಬೆನ್ಯಾಮೀನನ ಹಿರಿಯ ಮಗನ ಹೆಸರೇನು?
4. ಅಹಷ್ವೇರೋಷ ಅರಸನನ್ನು ಕೊಲ್ಲಬೇಕೆಂದು ಒಳಸಂಚು ಮಾಡಿದ ರಾಜಕಂಚುಕಿಗಳು ಯಾರು?
5. ಎಪ್ಫಥಾ ಎಂಬುದರ ಅರ್ಥವೇನು?
6. ಯೇಸು ಯೆರಿಕೋ ಪಟ್ಟಣದಲ್ಲಿ ಸ್ವಸ್ಥಮಾಡಿದ ಕುರುಡನ ಹೆಸರೇನು?
7. ಕ್ರಿಸ್ತನನ್ನು ಒಬ್ಬ ಸ್ತ್ರೀಯು ಅಚ್ಚ ಜಟಾಮಾಂಸಿ ತೈಲದಿಂದ ಅಭಿಷೇಕ ಮಾಡಿದ್ದು ಅಥವಾ ಅಭಿಷೇಕಿಸಿದ್ದು ಎಲ್ಲಿ?
8. ಅರಸನಾದ ಹೆರೋದನ ಗೃಹನಿರ್ವಾಹಕನು ಯಾರು?
9. ಮೊದಲು ಇಳಿದವನನ್ನು ಸ್ವಸ್ಥಪಡಿಸುವ ಮಹಿಮೆಯುಳ್ಳ ಕೊಳ ಯಾವುದು?

### ಫೆಬ್ರವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1. ಬೆಯೇರಿಯ (ಹೋಶೆ. 1:1).
2. ಪೆತೂವೇಲ (ಯೋವೇ. 1:1).
3. ತೆಕೋವ; ಕುರುಬನು ಅಥವಾ ಗೊಲ್ಲನ ಕೆಲಸ (ಆಮೋ. 1:1, 7:14–15).
4. ಗತ್‌ಹೆಫೆರ್; ಅಮಿತ್ತೈಯ ಮಗನು (ಯೋನ. 1:1).
5. ಮೋರೆಷೆತ್ (ಮೀಕ. 1:1).
6. ಎಲ್ಕೋಷ್ (ನಹೂ. 1:1).
7. ಶೆಯಲ್ತೀಯೇಲ (ಹಗ್ಗಾ. 1:1).
8. ಯೆಹೋಚಾದಾಕ (ಹಗ್ಗಾ. 1:14).
9. ಬೆರೆಕ್ಯ (ಜೆಕ. 1:1).
10. ಚಿಪ್ಪೋರನ ಮಗನು (ಅರಣ್ಯ. 22:2).

## ಡಿಜಿಎಮ್ ಬೇತೇಲ್ ಅಂಕಣ

- ಸಹೋ॥ ಸಂದೀಪ್ ನತಾನಿಯೇಲ್ ಹಾಗೂ ಸಹೋ॥ ಪ್ರೀತಾರವರಿಗೆ ದೇವರು ದಾನವಾಗಿ ನೀಡಿದ ಹೆಣ್ಣು ಮಗುವಿಗೆ ಬ್ಲೆಸೀ ನತಾನಿಯೇಲ್ ಎಂದು ನಾಮಕರಣ ಮಾಡಿ ದೇವರಿಗೆ ಪ್ರತಿಷ್ಠಿಸಲಾಯಿತು.
- ಸಹೋ॥ ಕೃಷ್ಣ ಹಾಗೂ ಸಹೋ॥ ಭಾವನಿರವರಿಗೆ ದೇವರು ದಾನವಾಗಿ ನೀಡಿದ ಹೆಣ್ಣು ಮಗುವಿಗೆ ಪ್ರತೀಕ್ಷಾ ಎಂದು ನಾಮಕರಣ ಮಾಡಿ ದೇವರಿಗೆ ಪ್ರತಿಷ್ಠಿಸಲಾಯಿತು.
- ಫೆಬ್ರವರಿ 11 ರಿಂದ 16ರವರೆಗೆ ಡಿಜಿಎಂ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರ ಸಭೆಯಲ್ಲಿ ನಡೆದ ಸ್ವಸ್ಥತೆ ಹಾಗೂ ಬಿಡುಗಡೆ ಕೂಟಗಳು ಒಳ್ಳೆ ರೀತಿಯಲ್ಲಿ ನಡೆಯುವಂತೆ ಕರ್ತನು ಕೃಪೆ ಮಾಡಿದನು.
- ವಿಶ್ವಾಸದಮನೆ ಮಾನಸಿಕ ಅಸ್ವಸ್ಥರ ಪುನರ್‌ವಸತಿ ಕೇಂದ್ರದಲ್ಲಿ ಆರೈಕೆ ಹಾಗೂ ಶುಶ್ರೂಷೆ ಹೊಂದಿ ಗುಣಮುಖರಾದ ಸಹೋ॥ ಚಂದ್ರಶೇಖರ್‌ರವರು ತಮ್ಮ ಮನೆಗೆ ತೆರಳಿದ್ದಾರೆ.

ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಆಜ್ಞೆಗಳಲ್ಲಿ ಅತ್ಯಾನಂದಪಡುವನೋ ಅವನೇ ಧನ್ಯನು (ಕೀರ್ತ. 112:1).